
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

25 ಮಾರ್ಚ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 14 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕಾಂತಾರ ಸಿನಿಮಾದ ವಿವಾದ ಸೃಷ್ಟಿಸಿದ್ದ ರಣವೀರ್ ಸಿಂಗ್ ಅವರು ಚಾಮುಂಡಿ ಬೆಟ್ಟಕ್ಕೆ ಬಂದು ವೈಯಕ್ತಿಕವಾಗಿ ಕ್ಷಮೆಯಾಚಿಸಲು ಸಿದ್ಧರಿದ್ದಾರೆಂದು ಅವರ ವಕೀಲರು ಮಾಹಿತಿ ನೀಡಿದ್ದಾರೆ.


ಉಪ್ಪಿಗಿಂತ ಮೊದಲು ನೀರು » 2


ಕ್ಷಯ ರೋಗದ ಬಗ್ಗೆ ಎಚ್ಚರ ವಹಿಸಿ » 3


ಸಕಾರಾತ್ಮಕ ಚಿಂತನೆಯಿಂದ ಏಳಿಗೆ ಸಾಧ್ಯ : ನಿಶ್ಚಲಾನಂದನಾಥ ಶ್ರೀ » 4

# ಮಧ್ಯ ಪ್ರಾಚ್ಯ ಯುದ್ಧ: ಮೋದಿ-ಟ್ರಂಪ್ ಮಾತುಕತೆ

## ಹಾರ್ಮುಜ್ ಜಲಸಂಧಿ ಸಮಸ್ಯೆ ಚರ್ಚೆ | ಶಾಂತಿ ಸ್ಥಾಪನೆಗೆ ಪ್ರಧಾನಿ ಸಲಹೆ

• ಪ್ರಜೋದಯ ವರದಿ

**ನವದೆಹಲಿ:** ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧದ ಕಾರ್ಮೋಡ ಕವಿದಿರುವ ಬೆನ್ನಲ್ಲೇ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ.

ಮುಖ್ಯವಾಗಿ ಹಾರ್ಮುಜ್ ಜಲಸಂಧಿ ಮುಕ್ತವಾಗಿಸುವ ಕಾರ್ಯತಂತ್ರ ಹಾಗು ಮಧ್ಯಪ್ರಾಚ್ಯದ ಬಿಕ್ಕಟ್ಟಿನ ಕುರಿತು ಉಭಯ ನಾಯಕರು ಪ್ರಸ್ತಾಪಿಸಿದ್ದಾರೆ. ಈ ಕುರಿತು ಅಮೇರಿಕಾ ರಾಯಭಾರಿ ಸೆರ್ಗಿಯೊ ಗೋರ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಅಮೇರಿಕಾ ಅಧ್ಯಕ್ಷ ಟ್ರಂಪ್ ಪ್ರಧಾನಿ ಮೋದಿ ಅವರೊಂದಿಗೆ ಮಾತನಾಡಿದ್ದಾರೆ. ಮಧ್ಯಪ್ರಾಚ್ಯದ ಪ್ರಸ್ತುತ ಸ್ಥಿತಿಗತಿ ಮತ್ತು ಹಾರ್ಮುಜ್ ಜಲಸಂಧಿ ಮುಕ್ತವಾಗಿಸುವ ಮಹತ್ವದ ಕುರಿತು ಚರ್ಚಿಸಿದ್ದಾರೆಂದು ತಿಳಿಸಿದ್ದಾರೆ. ಇದಾದ ಕೆಲವೇ ನಿಮಿಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ



ಅವರೂ ಪೋಸ್ಟ್ ಹಂಚಿಕೊಂಡಿದ್ದಾರೆ.

ಅಧ್ಯಕ್ಷ ಟ್ರಂಪ್ ಅವರ ಕರೆ ಸ್ವೀಕರಿಸಿ ಮಾತನಾಡಿದೆ. ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಕುರಿತು ಉಪಯುಕ್ತ ಅಭಿಪ್ರಾಯಗಳನ್ನ ಹಂಚಿಕೊಂಡೆವು. ಭಾರತವು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ಸಾಧ್ಯವಾದಷ್ಟು ಬೇಗ ಶಾಂತಿಯನ್ನ ಪುನಃಸ್ಥಾಪಿಸಲು ಬೆಂಬಲಿಸುತ್ತದೆ. ಹಾರ್ಮುಜ್ ಜಲಸಂಧಿಯು ಮುಕ್ತ ಮತ್ತು ಸುರಕ್ಷಿತ ಮತ್ತು ಪ್ರವೇಶಿಸಬಹುದಾದ ಸ್ಥಳವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಇಡೀ ಜಗತ್ತಿಗೆ ಅತ್ಯಗತ್ಯವಾಗಿದೆ. ಅಲ್ಲದೇ ಶಾಂತಿ ಮತ್ತು ಸ್ಥಿರತೆ ಕಾಯ್ದುಕೊಳ್ಳಲು ಅಗತ್ಯವಿರುವ ಎಲ್ಲಾ ಪ್ರಯ್ನಗಳ ಕುರಿತು ಚರ್ಚಿಸಲು ಸಂಪರ್ಕದಲ್ಲಿರಲು ಒಪ್ಪಿಕೊಂಡಿದ್ದೇವೆಂದು ಬರೆದುಕೊಂಡಿದ್ದಾರೆ.

ಜಾಗತಿಕ ತೈಲ ಮಾರುಕಟ್ಟೆ ವಿಚಾರವಾಗಿ ಹಾರ್ಮುಜ್ ಜಲಸಂಧಿಯು ವಿಶ್ವದ ತೈಲ ಸಾಗಣೆಯ ಬಹುದೊಡ್ಡ ಭಾಗ ಹಾದು ಹೋಗುವ ಅತ್ಯಂತ ನಿರ್ಣಾಯಕ ಸಮುದ್ರ ಮಾರ್ಗವಾಗಿದೆ. ಒಂದು ವೇಳೆ ಈ ಮಾರ್ಗದಲ್ಲಿ ಅಡಚಣೆಯುಂಟಾದರೆ ಅದು ಜಾಗತಿಕ ಇಂಧನ ಮಾರುಕಟ್ಟೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಪೆಟ್ರೋಲ್-ಡೀಸೆಲ್ ಬೆಲೆಗಳಲ್ಲಿ ಭಾರೀ ಏರಿಕೆಯಾಗುವ ಸಾಧ್ಯತೆ ಇರುತ್ತದೆ. ಈ ಪ್ರಮುಖ ಕಾರಿಡಾರ್‌ನಲ್ಲಿ ಸಂಭವಿಸಬಹುದಾದ ಯಾವುದೇ ಅಡೆತಡೆಗಳು ಅಂತರಾಷ್ಟ್ರೀಯ ವ್ಯಾಪಾರಕ್ಕೆ ದೊಡ್ಡ ಹೊಡೆತ ನೀಡಬಹುದೆಂಬ ಆತಂಕದ ನಡುವೆ ಚರ್ಚೆ ನಡೆದಿದೆ ಎನ್ನಲಾಗಿದೆ.

**ಭಾರತದತ್ತ ಎರಡು ಹಡಗು**

ಅಮೇರಿಕಾ, ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ ಮುಚ್ಚುವಿಕೆಯ ಆತಂಕಗಳ ನಡುವೆ ಸೌದಿ ಅರೇಬಿಯಾದಿಂದ ಕಚ್ಚಾ ತೈಲ ಮತ್ತು ಯುಎಇಯಿಂದ ಎಲ್‌ಪಿಜಿ ಟ್ಯಾಂಕರ್‌ಗಳಿದ್ದ ಎರಡು ಹಡಗುಗಳು ಹಾರ್ಮುಜ್ ಜಲಸಂಧಿ ದಾಟಿ ಭಾರತದತ್ತ ಹೊರಟಿವೆ ಎಂದು ವರದಿ ತಿಳಿಸಿದೆ.

ಅಮೇರಿಕಾ, ಇರಾನ್ ಯುದ್ಧದ ಹಿನ್ನಲೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗೆ ಅಧಿಕೃತ ಪ್ರವಾಸ ರದ್ದು ಮಾಡಿ ವಾಪಸಾಗಿರುವ ನೌಕಾಪಡೆ ಮುಖ್ಯಸ್ಥ ದಿನೇಶ್ ತ್ರಿಪಾಠಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. 92,612.59 ಮೆಟ್ರಿಕ್ ಟನ್ ಇಂಧನ ಹೊತ್ತ ಭಾರತೀಯ ಧ್ವಜ ಹೊಂದಿರುವ ಎಂವಿ ಜಗ್ ವಸಂತ್ ಮತ್ತು ಎಂವಿ ಪೈನ್ ಗ್ಯಾಸ್ ಹಡುಗುಗಳು ಸೋಮವಾರ ಬೆಳಿಗ್ಗೆ ಗಲ್ಫ್‌ನಿಂದ ಹೊರಟು ಸಂಜೆ ವೇಳೆಗೆ ಹೊರ್ಮುಜ್ ಜಲಸಂಧಿ ದಾಟಿ ಭಾರತದತ್ತ ಹೊರಟಿವೆ ಎಂದು ವರದಿ ತಿಳಿಸಿದೆ.

ಈ ಹಡಗುಗಳಲ್ಲಿ ಕ್ರಮವಾಗಿ 33 ಮತ್ತು 27 ಮಂದಿ ನಾವಿಕರು ಇದ್ದಾರೆ. ಜಗ್ ವಸಂತ್ ಮಾರ್ಚ್ 26ರಂದು ಕಾಂಡ್ಲಾ ಬಂದರನ್ನು ತಲುಪುವ ಸಾಧ್ಯತೆ ಇದೆ. ಪೈನ್ ಗ್ಯಾಸ್ ಹಡಗು ಮಾರ್ಚ್ 28ರಂದು ನವಮಂಗಳೂರು ತಲುಪಲಿದೆ ಎಂದು ಹಡಗು ಸಚಿವಾಲಯ ತಿಳಿಸಿದೆ.

### ಭಾರತ ಹಣ ಪಾವತಿಸಿಲ್ಲ

ಪರ್ಷಿಯನ್ ಕೊಲ್ಲಿಯಾದ್ಯಂತ ನಿರಂತರ ಕ್ಷಿಪಣಿ, ಡ್ರೋನ್ ಮತ್ತು ಗುಂಡಿನ ದಾಳಿಯಿಂದಾಗಿ, ಯುದ್ಧ ವಲಯದಲ್ಲಿ ಟ್ಯಾಂಕರ್‌ಗಳಲ್ಲಿರುವ ಭಾರತೀಯ ಸಿಬ್ಬಂದಿ ಹೆಚ್ಚು ಒತ್ತಡಕ್ಕೊಳಗಾಗಿದ್ದಾರೆ. ಈ ಹಿನ್ನಲೆಯಲ್ಲಿ ಭಾರತೀಯ ನೌಕಾಪಡೆ ಮತ್ತು ಹಡಗು ಮಾಲೀಕರು ನಾವಿಕರಿಗೆ ಧೈರ್ಯ ತುಂಬಲು ನಿರಂತರವಾಗಿ ಅವರೊಂದಿಗೆ ಮಾತನಾಡುತ್ತಿದ್ದಾರೆ.

ಭಾರತದ ಎಲ್‌ಪಿಜಿ ಟ್ಯಾಂಕರ್‌ಗಳ ಸಾಗಣೆಗೆ ಅವಕಾಶ ನೀಡಿದ್ದಕ್ಕಾಗಿ ಇರಾನ್‌ಗೆ ಭಾರತ ಹಣ ಪಾವತಿ ಸಿಲ್ಲ. ಹಾರ್ಮುಜ್ ಜಲಸಂಧಿಯ ಮೂಲಕ ಹಾದು ಹೋಗುವ ಪ್ರತಿ ಹಡಗಿಗೆ ಇರಾನ್ 2 ಮಿಲಿಯನ್ ಡಾಲರ್ ಶುಲ್ಕ ವಿಧಿಸುತ್ತಿದೆಯೆಂಬ ವರದಿಗಳನ್ನು ಭಾರತದ ಇರಾನಿನ ರಾಯಭಾರ ಕಚೇರಿ ತಳ್ಳಿ ಹಾಕಿದೆ.

## ಹಣಕಾಸು ಯೋಜನೆ ಅನುದಾನ ಪಡೆಯಲು ಕರ್ನಾಟಕ ಅನರ್ಹ

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು 15ನೇ ಹಣಕಾಸು ಆಯೋಗದ 2025-26ನೇ ಸಾಲಿನ ಅನುದಾನ ಪಡೆಯಲು ಅನರ್ಹವಾಗಿವೆ ಎಂದು ಕೇಂದ್ರ ಪಂಚಾಯತ್‌ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ಅವರು ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅವರು, ಜಿಲ್ಲಾ ಹಾಗು ತಾಲ್ಲೂಕು ಪಂಚಾಯಿತಿಗಳಿಗೆ 2021ರ ಫೆಬ್ರವರಿಯಿಂದ ಚುನಾವಣೆ ನಡೆಸದಿರುವುದೇ ಕಾರಣ ಎಂದಿದ್ದಾರೆ. 202021ರಿಂದ 202425ರ ವರೆಗಿನ ಹಣಕಾಸು ಆಯೋಗದ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅನುದಾನದ ಎಲ್ಲಾ ಕಂತುಗಳನ್ನು ರಾಜ್ಯದ ಅರ್ಹ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಆದರೆ, 202526ನೇ ಸಾಲಿನ ಎರಡು ಕಂತುಗಳನ್ನು ರಾಜ್ಯಕ್ಕೆ ಕೊಟ್ಟಿಲ್ಲ. ಕೇಂದ್ರ



ಬಿಡುಗಡೆ ಮಾಡಿರುವ ಮೊತ್ತವನ್ನು ಸಕಾಲಕ್ಕೆ ಪಂಚಾಯಿತಿಗಳಿಗೆ ರಾಜ್ಯ ಸರ್ಕಾರ ವರ್ಗಾವಣೆ ಮಾಡಿರಲಿಲ್ಲ. ಜೊತೆಗೆ ವಿಳಂಬದ ದಂಡವನ್ನೂ ಪಾವತಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ. ಹಣಕಾಸು ಆಯೋಗದ ಅನುದಾನಗಳ ಬಳಕೆಗಾಗಿ ಕಾರ್ಯಾಚರಣೆ ಮಾರ್ಗಸೂಚಿಯನ್ನು 2021ರಲ್ಲಿ ಹೊರಡಿಸಲಾಗಿತ್ತು. ಅದರ ಪ್ರಕಾರ ಪ್ರತಿ ಹಣಕಾಸು ವರ್ಷದಲ್ಲಿ ಎರಡು ಕಂತುಗಳಲ್ಲಿ ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಪ್ರತಿ ಕಂತಿನ ಬಿಡುಗಡೆಗೆ ಮುನ್ನ ಹಿಂದಿನ ಕಂತಿನ ಅನುದಾನ ವರ್ಗಾವಣೆ ಪ್ರಮಾಣ ಪತ್ರ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಪ್ರತ್ಯೇಕವಾಗಿ ನಿರಕ್ಷೇಪಣಾ ಪ್ರಮಾಣ ಪತ್ರ ಸಲ್ಲಿಸುವ ಅಗತ್ಯ ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

## ಕಾರು ಡಿಕ್ಕಿ: 20 ಅಡಿ ದೂರ ಹಾರಿ ಬಿದ್ದ ಯುವಕ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬಾಳ್ಳುಪೇಟೆಯ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ರಸ್ತೆ ದಾಟುತ್ತಿದ್ದ ಯುವಕನಿಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಯುವಕ ಗಂಭೀರ ಗಾಯ ಗೊಂಡಿರುವ ಘಟನೆ ನಡೆದಿದೆ.

ಗಾಯಗೊಂಡ ಯುವಕನನ್ನು ದಿನೇಶ್ ಕುಮಾರ್ ಎಂದು ಗುರುತಿಸಲಾಗಿದೆ. ಬಾಳ್ಳುಪೇಟೆ ಬಳಿ ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದ್ದು, ಡಿಕ್ಕಿಯ ರಭಸಕ್ಕೆ ಯುವಕ ಸುಮಾರು 20 ಅಡಿ ದೂರಕ್ಕೆ ಹಾರಿ ಬಿದ್ದಿದ್ದಾನೆ.

ಅಪಘಾತಕ್ಕೀಡಾದ ಕಾರು ಬೆಂಗಳೂರು ಮೂಲದಾಗಿದೆ ಕಾರಿನಲ್ಲಿ ವಕೀಲರ ಕುಟುಂಬವು ಬೆಂಗಳೂರಿನಿಂದ ಕುಂದಾಪುರದ ದೇವಸ್ಥಾನಕ್ಕೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಅಪಘಾತದ ದೃಶ್ಯವು ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಡಿಕ್ಕಿಯ ತೀವ್ರತೆ ಎಷ್ಟಿತ್ತೆಂದು ದೃಶ್ಯದಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ. ಸ್ಥಳೀಯರು ತಕ್ಷಣವೇ ಗಾಯಾಳುವನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

# ಕ್ರಷರ್ ಸ್ಥಳಾಂತರಕ್ಕೆ ಹೆಚ್ಚಿದ ಒತ್ತಡ: ಜಿಲ್ಲಾಧಿಕಾರಿ ಪರಿಶೀಲನೆ

## ಎರಡು ತಿಂಗಳಿಂದ ಶಾಲೆಗೆ ಹೋಗದ ಮಕ್ಕಳು | ಪೋಷಕರ ಮನವೊಲಿಕೆ ಪ್ರಯತ್ನ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಅರಸೀಕಟ್ಟೆ ಸಮೀಪದ ನೆಹರೂ ನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾಗು ಅಂಗನವಾಡಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳೊಂದಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

ಕಳೆದ ಎರಡು ತಿಂಗಳಿಂದಲೂ ನಿರಂತರವಾಗಿ ನೆಹರೂ ನಗರ ಶಾಲೆ ಮತ್ತು ಅಂಗನವಾಡಿ ಕೇಂದ್ರಕ್ಕೆ ಮಕ್ಕಳನ್ನು ಪೋಷಕರು ಕಳುಹಿಸುತ್ತಿಲ್ಲದಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಅಲ್ಲದೆ ಸಮೀಪದ ಖಾಸಗಿ ಕ್ರಷರ್‌ಗೆ ಭೇಟಿ ನೀಡಿ ಅಲ್ಲಿ ಪರಿಸರಕ್ಕೆ ಪೂರಕವಾಗಿ ಕೈಗೊಂಡಿರುವ ಕ್ರಮಗಳ ಕುರಿತು ತಪಾಸಣೆ ನಡೆಸಿದರು.

ತಹಶೀಲ್ದಾರ್ ಸೌಮ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ, ಗಣಿ ಇಲಾಖೆ ಅಧಿಕಾರಿ ಮಮತಾ, ಅರಣ್ಯ ಇಲಾಖೆ ಅಧಿಕಾರಿ, ಕಂದಾಯ ಇಲಾಖೆ ಅಧಿಕಾರಿ ಹಾಗು ಸಿಬ್ಬಂದಿ ಹಾಜರಿದ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿ



ಕಾರಿ ಕೆ.ಎಸ್.ಲತಾಕುಮಾರಿ ಅವರು, ಕ್ರಷರ್ ನಿಲ್ಲಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಗ್ರಾಮಸ್ಥರು ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ. ಕ್ರಷರ್‌ನಿಂದ ತೊಂದರೆಯಾಗುತ್ತಿದೆ ಎಂಬುದು ವಿದ್ಯಾರ್ಥಿ ಹಾಗು ಪೋಷಕರ ಆರೋಪವಾಗಿದೆ. ಈಗಾಗಲೇ ಶಾಲಾ ಕಟ್ಟಡ ಸೇರಿ ಮನೆಗಳಿಗೂ ಹಾನಿ ಸಂಭವಿಸುತ್ತಿದೆ. ಕೆಲವು ಮನೆಗಳು ದುರಸ್ತಿಗೆ ಒಳಗಾಗುತ್ತಿವೆ. ಅಲ್ಲದೆ ಮಕ್ಕಳು ಸೇರಿ ಗ್ರಾಮಸ್ಥರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂಬ ಬಗ್ಗೆ ದೂರು ಬಂದಿದೆ. ಈ ಸಲುವಾಗಿ ಗ್ರಾಮಕ್ಕೆ ಭೇಟಿ ನೀಡಿದ್ದೇನೆ. ಕೂಡಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಕ್ರಷರ್ ತೆರವು ಮಾಡಿಕೊಡಿ ಎಂಬುದು ಗ್ರಾಮಸ್ಥರ ಪ್ರಮುಖ ಆಗ್ರಹವಾಗಿದೆ. ಈ ಸಲುವಾಗಿ ಸರ್ಕಾರಿ ಶಾಲೆ, ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ವಾಸ್ತವತೆ ಬಗ್ಗೆ ಪರಿಶೀಲನೆ ಮತ್ತು ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಪ್ರಮುಖವಾಗಿ ಮಕ್ಕಳು ಶಿಕ್ಷಣದಿಂದ ವಂಚನೆಗೆ ಒಳಗಾಗಬಾರದು. ಈ ಹಿನ್ನಲೆ ಶಿಕ್ಷಣ ಇಲಾಖೆ ಅಧಿಕಾರಿಗಳು ನಿರಂತವಾಗಿ ಮಕ್ಕಳ ಪೋಷಕರನ್ನು ಮನ ವೊಲಿಸುವ ಕೆಲಸ ನಡೆಯುತ್ತಿದೆ. » ನಾಲ್ಕನೇ ಪುಟದಲ್ಲಿ

### ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳುವ ಭರವಸೆ

ಕ್ರಷರ್ ಕಾನೂನು ಬಾಹಿರವಾಗಿದ್ದರೆ ಜಿಲ್ಲಾಧಿಕಾರಿ ಅದನ್ನು ಸ್ಥಳಾಂತರಿಸುವ ಅಥವಾ ಮುಚ್ಚುವ ಕ್ರಮ ಕೈಗೊಳ್ಳುತ್ತಾರೆಂದು ಶಾಸಕ ಎ.ಮಂಜು ಅವರು ಪ್ರತಿಕ್ರಿಯಿಸಿದ್ದಾರೆ. ಶಾಲೆಗೆ ಮಕ್ಕಳನ್ನು ಕಳುಹಿಸಿ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಿ ಎಂದು ಮನವಿ ಮಾಡಿದರೂ ಕೂಡ ಗ್ರಾಮಸ್ಥರು ಒಪ್ಪಿಲ್ಲ. ಈ ಕುರಿತು ನಾನೂ ಸಹ ಗ್ರಾಮಸ್ಥರೊಂದಿಗೆ ಸಭೆ ನಡೆಸಿದ್ದೇನೆಂದು ಹೇಳಿದ್ದಾರೆ.

## ಮಹಿಳಾ ಸಿಬ್ಬಂದಿ ಜೊತೆ ಅಸಭ್ಯ ವರ್ತನೆ: ದಂಡ ವಿಧಿಸಿದ ನ್ಯಾಯಾಲಯ

• ಪ್ರಜೋದಯ ವರದಿ

**ಹಾಸನ:** ಕಡತ ಪರಿಶೀಲನೆ ನೆಪದಲ್ಲಿ ಮಹಿಳಾ ಸಿಬ್ಬಂದಿ ಜೊತೆ ಅಸಭ್ಯವಾಗಿ ವರ್ತಿಸಿದ್ದ ಕಂದಾಯ ನಿರೀಕ್ಷಕನಿಗೆ 20 ಸಾವಿರ ರೂ. ದಂಡ, 25 ಸಾವಿರ ರೂ. ಮೌಲ್ಯದ ಮುಚ್ಚಳಿಕೆ ಬಾಂಡ್ ಹಾಗು 2 ವರ್ಷಗಳ ಕಾಲ ಸನ್ನಡೆ ಹಾಗು ಕಾಪಾಡುವಂತೆ ಜಿಲ್ಲಾ ನ್ಯಾಯಾಲಯ ಆದೇಶಿಸಿದೆ.

ಕಟ್ಟಾಯ ನಾಡ ಕಚೇರಿ ಕಂದಾಯ ನಿರೀಕ್ಷಕ ಬಿ.ಮೋಹನ್ ಕುಮಾರ್ ಎಂಬುವವರಿಗೆ ದಂಡ ವಿಧಿಸಲಾಗಿದೆ.

2016ರ ಡಿ.16ರಂದು ಕಟ್ಟಾಯ ನಾಡ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಗ್ರಾಮ ಲೆಕ್ಕಾಧಿಕಾರಿಯನ್ನು ಕಡತ ಪರಿಶೀಲನೆ ನೆಪದಲ್ಲಿ ಕೊಠಡಿಗೆ ಕರೆಸಿಕೊಂಡಿದ್ದ ಮೋಹನ್ ಕುಮಾರ್ ಅಸಭ್ಯವಾಗಿ ವರ್ತಿಸಿ, ಲೈಂಗಿಕ ಕಿರುಕುಳ ನೀಡಿದ್ದ ಎಂದು ಗೊರೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 1ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶೆ ಬಿ.ಎಂ.ಶೈಲಾ ಅವರು, ಸಾಕ್ಷಿದಾರರ ಹೇಳಿಕೆ ಪರಿಗಣಿಸಿ ಬಿ.ಮೋಹನ್ ಕುಮಾರ್ ಅವರಿಂದ 25 ಸಾವಿರ ರೂ. ಮೌಲ್ಯದ ಮುಚ್ಚಳಿಕೆ ಬಾಂಡ್ ಪಡೆದು 2 ವರ್ಷಗಳ ಕಾಲ ಸನ್ನಡತೆ ಹಾಗು ಶಾಂತಿ ಕಾಪಾಡುವಂತೆ ಎಚ್ಚರಿಕೆ ನೀಡಿ, 20 ಸಾವಿರ ರೂ. ದಂಡವನ್ನು ಸಂತ್ರಸ್ತ ಮಹಿಳೆಗೆ ನೀಡುವಂತೆ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಹೆಚ್.ಕೆ.ಸುರೇಶ್ ವಾದ ಮಂಡಿಸಿದ್ದರು.

## ವರುಣ್ ಕೊಲೆ ಆರೋಪಿ ಶಶಾಂಕ್ ಗೋವಾದಲ್ಲಿ ಬಂಧನ

• ಪ್ರಜೋದಯ ವರದಿ

**ಹಾಸನ:** ಯುವಕನ ಕೊಲೆಗೈದು ಸಾಕ್ಷ್ಯ ನಾಶಕ್ಕಾಗಿ ದೇಹವನ್ನು ಸುಟ್ಟು ಹಾಕಿದ್ದ ಪ್ರಕರಣದ ಎ1 ಆರೋಪಿ ಶಶಾಂಕ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿ ಕಾಡಯ್ಯನಕೊಪ್ಪಲು ಗ್ರಾಮದ ವರುಣ್ (22) ಹತ್ಯೆ ಪ್ರಕರಣ ಸಂಬಂಧ ಈ ವರೆಗೆ ಐದು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಕೃತ್ಯದ ರೂವಾರಿಯನ್ನು ಬಂಧಿಸಿದ್ದಾರೆ. ತಲೆ ಮರೆಸಿಕೊಂಡಿದ್ದ ಶಶಾಂಕ್ ಗೋವಾದಲ್ಲಿದ್ದ ಎನ್ನಲಾಗಿದೆ.

ಮಂಗಳವಾರ ಬೆಳಿಗ್ಗೆ ನಗರದ ಗುಂಡೇಗೌಡನ ಕೊಪ್ಪಲಿನಲ್ಲಿರುವ ಮನೆಗೆ ಆರೋಪಿಯನ್ನು ಕರೆತಂದು ಪೊಲೀಸರು ಸ್ಥಳ ಮಹಜರು ನಡೆಸಿದರು. ದಕ್ಷಿಣ ವಲಯ ಐಜಿ ಬೋರಲಿಂಗಯ್ಯ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಭೇಟಿ ನೀಡಿ ಘಟನೆಯ ಕುರಿತು ಮಾಹಿತಿ ಪಡೆದುಕೊಂಡಿದ್ದಾರೆ.

ಮಾ.10, 11 ರಂದು ಎರಡೂ ದಿನ ದುರುಳರ ಗ್ಯಾಂಗ್ ವರುಣ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿತ್ತು. 12ರಂದು ವರುಣ್ ಮೃತಪಟ್ಟಿದ್ದ. ಮಾ.13ರ ರಾತ್ರಿ ವರುಣ್ ಮೃತದೇಹವನ್ನು ಬೈಕ್‌ನಲ್ಲೇ ತೆಗೆದುಕೊಂಡು ಹೋಗಿ ಸಾಕ್ಷ್ಯ ಸಿಗದಂತೆ ಸುಟ್ಟು ಹಾಕಿದ್ದರು. ಮಾ.15 ರಂದು ಗಂಡಸಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ವರುಣ್ ಸ್ನೇಹಿತರೇ ಆಗಿದ್ದ ಶಶಾಂಕ್ ಮತ್ತು ಆತನ ಗ್ಯಾಂಗ್ ಕೊಲೆ ಮಾಡಿರುವುದು ತನಿಖೆಯಲ್ಲಿ ಬಯಲಾಗಿದೆ. ಅದೃಷ್ಟವಶಾತ್ ವರುಣ್ ಜೊತೆ ಇದ್ದ ಮತ್ತೋರ್ವ ಗೆಳೆಯ ಲೋಹಿತ್ ಹಲ್ಲೆಯಿಂದ ಪಾರಾಗಿ ಜೀವ ಉಳಿಸಿಕೊಂಡಿದ್ದಾನೆ.

## ಪೆನ್‌ಡ್ರೈವ್ ಪ್ರಕರಣದ ಚಾರ್ಜ್‌ಶೀಟ್‌ನಲ್ಲಿ ಲೋಪ: ಹೋರಾಟದ ಎಚ್ಚರಿಕೆ




• ಪ್ರಜೋದಯ ವರದಿ

**ಹಾಸನ:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಅಶ್ಲೀಲ ವಿಡಿಯೋ ಪೆನ್ ಡ್ರೈವ್ ಪ್ರಕರಣ ಸಂಬಂಧ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಹಲವರ ಹೆಸರು ಕೈಬಿಟ್ಟಿದ್ದು, 15 ದಿನಗಳಲ್ಲಿ ಅವರನ್ನು ದೋಷಿಗಳನ್ನಾಗಿ ಪರಿಗಣಿಸದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದೆಂದು ಜೆಡಿಎಸ್ ಕಾನೂನು ಘಟಕದ ಮಾಜಿ ಉಪಾಧ್ಯಕ್ಷ ಎಂ.ಬಿ. ವಿಶ್ವನಾಥ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ವಕೀಲ ಪೂರ್ಣಚಂದ್ರ ಅವರು ನೀಡಿದ ದೂರಿನ ಆಧಾರದ ಮೇಲೆ 52 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಆದರೆ, ಎಸ್‌ಐಟಿ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ 39 ಜನರನ್ನು ಮಾತ್ರ ಪರಿಗಣಿಸಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ನವೀನ್ ಗೌಡ, ಸಂಸದ ಶ್ರೇಯಸ್ ಪಟೇಲ್, ಕ್ವಾಲಿಟಿ ಬಾರ್ ಶರತ್, ಪುಟ್ಟರಾಜ್ ಸೇರಿ ಅನೇಕರ ಹೆಸರನ್ನು ಕೈಬಿಟ್ಟಿದ್ದಾರೆ.

ಜೆಡಿಎಸ್‌ನ ಸಿ.ಆರ್.ಶಂಕರ್ ಅವರು ಪೆನ್‌ಡ್ರೈವ್ ಹಂಚುತ್ತಿದ್ದವರನ್ನು ಕಣ್ಣಾರೆ ಕಂಡಿದ್ದರೂ ಅವರ ಹೇಳಿಕೆ ದಾಖಲಿಸಿಲ್ಲ. ಆರೋಪಿಗಳನ್ನು ಚಾರ್ಜ್‌ಶೀಟ್‌ನಿಂದ ಹೊರಗಿಟ್ಟಿರುವುದಕ್ಕೆ ಸ್ಪಷ್ಟ ಕಾರಣ ನೀಡಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಪೆನ್‌ಡ್ರೈವ್ ಹಂಚಿಕೆಗೆ ಯಾರು ಪ್ರೇರೇಪಿಸಿದರು, ಅದನ್ನು ಒದಗಿಸಿದವರುಯಾರು ಎಂಬುದರ ಕುರಿತು ತನಿಖೆಯಲ್ಲಿ ಸ್ಪಷ್ಟತೆ ಇಲ್ಲ. ಜೆಡಿಎಸ್ ಕಾರ್ಯಕರ್ತರನ್ನು ಉದ್ದೇಶ ಪೂರ್ವಕವಾಗಿ ಸಿಲುಕಿಸಲಾಗಿದೆ. ರಾಜಕೀಯ ಪ್ರೇರಿತವಾಗಿ ತನಿಖೆ ನಡೆಸಿ ಪ್ರಭಾವಿಗಳಿಗೆ ರಕ್ಷಣೆ ನೀಡಲಾಗಿದೆಯೆಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ವಕೀಲರಾದ ಶೇಷಾದ್ರಿ, ವಿಶ್ವನಾಥ್, ನಯನ, ಲೋಕೇಶ್ ಇತರರಿದ್ದರು.

## ನಿರ್ಲಕ್ಷ್ಯದ ಚಾಲನೆ: ಲಾರಿಗೆ ಬಸ್ ಡಿಕ್ಕಿಯಾಗಿ ಇಬ್ಬರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮುಂದೆ ಹೊರಟಿದ್ದ ಲಾರಿ ಓವರ್‌ಟೇಕ್ ಮಾಡಲು ಖಾಸಗಿಬಸ್ (ದುರ್ಗಾಂಬಮೋಟಾರ್ಸ್) ಚಾಲಕ ವೇಗವಾಗಿ ಓಡಿಸಿದ್ದರಿಂದ ಮುಂದೆ ಹೊರಟಿದ್ದ ಲಾರಿಗೆ ಡಿಕ್ಕಿಯಾಗಿ ಇಬ್ಬರು ಮೃತಪಟ್ಟು 20 ಜನರು ಗಾಯಗೊಂಡಿರುವ ಘಟನೆ ಮಂಗಳವಾರ ತಾಲ್ಲೂಕಿನ ಹಿರೀಸಾವೆ ಸಮೀಪ ರಾಷ್ಟ್ರೀಯ ಹೆದ್ದಾರಿ 75ರ ಅಮ್ಮ ಕುಟೀರ ಬಳಿ ನಡೆದಿದೆ.

ಕುಂದಾಪುರ ಮೂಲದ ಕೃಷ್ಣ ಶೆಟ್ಟಿ (42) ಹಾಗು ಹಾಸನದ ಎಸ್.ಎಂ. ಕೃಷ್ಣ ಬಡಾವಣೆ ನಿವಾಸಿ ಮದನ್ (30) ಮೃತರು. ಗಾಯಾಳುಗಳನ್ನು ಬೆಳ್ಳೂರು ಕ್ರಾಸ್‌ನ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.




ಮಂಗಳೂರಿನಿಂದ ಬೆಂಗಳೂರಿಗೆ ಹೊರಟಿದ್ದ ಬಸ್ ಬೆಳಿಗ್ಗೆ 4.40ರ ಸಮಯದಲ್ಲಿ ಹಿರೀಸಾವೆ ಸಮೀಪ ಹೋಗುತ್ತಿದ್ದಾಗ ಮುಂದೆ ಹೊರಟಿದ್ದ ಲಾರಿಯನ್ನು ಓವರ್‌ಟೇಕ್ ಮಾಡಲು ಚಾಲಕ ಜೋರಾಗಿ ಓಡಿಸಿದ್ದಾನೆ. ಅಪಘಾತದ ರಭಸಕ್ಕೆ ಬಸ್‌ನ ಮುಂಭಾಗ ಸಂಪೂರ್ಣ ಜಖಂ ಗೊಂಡಿದೆ. ಕೃಷ್ಣಶೆಟ್ಟಿ ಅವರು ಘಟನಾ ಸ್ಥಳದಲ್ಲೇ ಮೃತಪಟ್ಟರೆ, ಮದನ್ ಅವರು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

ಅಪಘಾತದಿಂದ ಕೆಲ ಹೊತ್ತು ಸಂಚಾರದಲ್ಲಿ ವ್ಯತ್ಯಯವುಂಟಾಯಿತು. ಹಿರೀಸಾವೆ ಪೊಲೀಸರು ಸ್ಥಳಕ್ಕಾಗಮಿಸಿ ಬೇರೆ ವಾಹನಗಳ ಓಡಾಟಕ್ಕೆ ಅನುವು ಮಾಡಿಕೊಟ್ಟರು. ಈ ಸಂಬಂಧ ಪ್ರಕರಣ ದಾಖಲಾಗಿದೆ.

## ಸಿಲಿಂಡರ್ ಅಭಾವ: ಹೋಟೆಲ್ ಉದ್ಯಮಕ್ಕೆ ಹೊಡೆತ

• ಪ್ರಜೋದಯ ವರದಿ

**ಹಾಸನ:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಸಂಘರ್ಷದಿಂದ ಗ್ಯಾಸ್ ಸಿಲಿಂಡರ್ ಸಿಗದೆ ಹೋಟೆಲ್ ಉದ್ಯಮ ನೆಲ ಕಚ್ಚಿದ್ದು ನಗರದಲ್ಲಿ ಹೋಟೆಲ್‌ಗಳು ಬಂದ್ ಆಗುತ್ತಿವೆ.

ವಾಣಿಜ್ಯ ಬಳಕೆಯ ಗ್ಯಾಸ್ ಅಭಾವ ಮಿತಿ ಮೀರಿರುವ ಹಿನ್ನಲೆಯಲ್ಲಿ ಅಡುಗೆ ಮಾಡಲು ಸಾಧ್ಯವಾಗುತ್ತಿಲ್ಲ. ಖಾಸಗಿಯಾಗಿ ಸಿಲಿಂಡರ್ ಖರೀದಿಗೆ ಮುಂದಾದರೆ ದರ ಐದು ಪಟ್ಟು ಹೆಚ್ಚಾಗಿದೆ. ಅದಕ್ಕಿಂತ ಪರಿಸ್ಥಿತಿ ಸುಧಾರಿಸುವ ವರೆಗೆ ಉದ್ಯಮ ನಡೆಸುವುದೇ ಬೇಡವೆಂಬ ನಿರ್ಧಾರಕ್ಕೆ ಹೋಟೆಲ್ ಮಾಲೀಕರು ಬಂದಿದ್ದಾರೆ.

**ಆರಂಭವಾದ ತಿಂಗಳಲ್ಲೇ ಬಂದ್**

ನಗರದ ಎಂ.ಜಿ.ರಸ್ತೆಯಲ್ಲಿ ಒಂದು ತಿಂಗಳ ಹಿಂದೆ ಆರಂಭವಾಗಿರುವ ಮಂತ್ರಾಲಯಂ ಹೋಟೆಲ್ ಬಂದ್ ಆಗಿದೆ. ಶ್ರೀದೇವಿ ಅವರು 8 ಲಕ್ಷ ರೂ. ಸಾಲ ಮಾಡಿ ಹೋಟೆಲ್ ಆರಂಭಿಸಿದ್ದಾರೆ. ಸಿಲಿಂಡರ್ ಸಿಗದ ಹಿನ್ನಲೆಯಲ್ಲಿ ಅವರು ಪರ್ಯಾಯ




ದಾರಿ ಇಲ್ಲದೆ ಸಾರಿ ನೋ ಗ್ಯಾಸ್, ಸೋ ಕ್ಲೋಸ್ಡ್ ಎಂದು ಫಲಕ ಅಂಟಿಸಿದ್ದಾರೆ.

ಶ್ರೀದೇವಿ ಅವರು ಮಾತನಾಡಿ, ಹೋಟೆಲ್ ಆರಂಭವಾಗಿ ಇನ್ನು ಒಂದು ತಿಂಗಳಾಗಿಲ್ಲ, ಇಎಂಐ ಪಾವತಿ, ಕಾರ್ಮಿಕರ ಸಂಬಳ ನೀಡಲು ಸಾಧ್ಯವಾಗುತ್ತಿಲ್ಲ. ಎಂಟು ಲಕ್ಷ ರೂ. ಸಾಲ ಮಾಡಿ ಹೋಟೆಲ್ ಆರಂಭಿಸಿದ್ದೇನೆ. ಈಗ ದಿಕ್ಕು ತೋಚ ದಂತಾಗಿದೆ ಯೆಂದು ಭಾವುಕರಾದರು.

**ನಾನ್‌ವೆಜ್ ಹೋಟೆಲ್ ಬಂದ್**

ನಗರದ ಕೆ.ಆರ್.ಪುರಂನಲ್ಲಿರುವ ಕೋಸ್ಟಲ್ ಕಿಚನ್ ಹೋಟೆಲ್ ಸಹ ಸಿಲಿಂಡರ್ ಕೊರತೆಯಿಂದ ಬಾಗಿಲು ಹಾಕಿದೆ. ನರ್ಸಿಂಗ್ ವಿದ್ಯಾರ್ಥಿಗಳು, ಸ್ಥಳೀಯರು ಹೆಚ್ಚಾಗಿ ಹೋಟೆಲ್‌ಗೆ ಬರುತ್ತಿದ್ದರು. ಆದರೆ ಊಟ ಸಿಗದೆ ತೊಂದರೆಗೆ ಸಿಲುಕುವಂತಾಗಿದೆ. ಸರ್ಕಾರ ಸಿಲಿಂಡರ್ ಸಮಸ್ಯೆಗೆ ಶೀಘ್ರ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಹೋಟೆಲ್ ಮಾಲೀಕರು ಆಗ್ರಹಿಸಿದ್ದಾರೆ.

## ಅಪಘಾತದಲ್ಲಿ ಗಾಯಗೊಂಡಿದ್ದ ಮಹಿಳೆ | ಒಂದೇ ಬಾರಿ ಎರಡು ಆಪರೇಷನ್

# ಹಿಮ್ಸ್‌ನಲ್ಲಿ ಅಪರೂಪದ ಶಸ್ತ್ರ ಚಿಕಿತ್ಸೆ: ಸಾವು ಗೆದ್ದ ತಾಯಿ-ಮಗು

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಅಪಘಾತದಲ್ಲಿ ಗಂಭೀರ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಒಂಬತ್ತು ತಿಂಗಳ ತುಂಬು ಗರ್ಭಿಣಿಗೆ ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡಿರುವ ಹಿಮ್ಸ್ ವೈದ್ಯರು ತಾಯಿ ಮತ್ತು ಮಗುವನ್ನು ರಕ್ಷಿಸಿರುವ ಅಪರೂಪದ ಘಟನೆ ನಡೆದಿದೆ.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನ್ಯೂರೋ ಸರ್ಜನ್ ಡಾ|| ಅಮೋಘ್ ಅವರು ಮಹಿಳೆಯ ಮೆದುಳು ಶಸ್ತ್ರ ಚಿಕಿತ್ಸೆ ಮಾಡಿದರೆ, ಅದೇ ಸಮಯದಲ್ಲಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರಾದ ಡಾ|| ರಾಜಶೇಖರ್, ಡಾ|| ಶೃತಿ ಅವರ 15 ಜನರ ತಂಡ ಸಿಸೇರಿಯನ್ ಮೂಲಕ ಮಗುವಿನ ಪ್ರಾಣ ಉಳಿಸಿದ್ದಾರೆ. ಒಂದೇ ಸಮಯಕ್ಕೆ ನಡೆದ ಎರಡೂ ಶಸ್ತ್ರ ಚಿಕಿತ್ಸೆಗೆ ಬರೋಬ್ಬರಿ 3 ಗಂಟೆ ಸಮಯ ತೆಗೆದುಕೊಂಡಿದ್ದಾರೆ. ವೈದ್ಯರ ದೃಢ ನಿರ್ಧಾರವು ಬಡಕುಟುಂಬವನ್ನು ಪ್ರಾಣಾಪಾಯದಿಂದ ಪಾರು ಮಾಡಿದೆ.






**ಮಾ.17ರಂದು ಅಪಘಾತ**

ಚನ್ನರಾಯಪಟ್ಟಣದ ನಾಗವೇಣಿ ಸಾವು ಗೆದ್ದ ಮಹಿಳೆ. ಮಾ.17ರ ಸಂಜೆ 4 ಗಂಟೆ ಪಟ್ಟಣದಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಅಪಘಾತ ಸಂಭವಿಸಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಅತಿಯಾದ ರಕ್ತಸ್ರಾವದಿಂದ ಕೋಮಾಗೆ ಜಾರಿದ್ದರು. ಪರಿಸ್ಥಿತಿ ಅತ್ಯಂತ ಗಂಭೀರವಾಗಿ ಬದುಕುವ ಸಾಧ್ಯತೆ ಅತೀ ಕಡಿಮೆ ಎಂದು ವೈದ್ಯರು ಅಂದಾಜಿಸಿದ್ದರು.

ಆದರೆ ಹಿಮ್ಸ್ ವೈದ್ಯರ ತಂಡ ಸವಾಲು ಸ್ವೀಕರಿಸಿ ತಕ್ಷಣವೇ ಕಾರ್ಯಪ್ರವೃತ್ತವಾಯಿತು. ತಾಯಿ ಜೀವ ಉಳಿಸುವುದೂ, ಗರ್ಭದಲ್ಲಿದ್ದ ಮಗುವನ್ನು ಸುರಕ್ಷಿತವಾಗಿ ಕಾಪಾಡುವುದೂ ಒಂದೇ ಸಮಯದಲ್ಲಿ ಮಾಡುವ ದೊಡ್ಡ ಸವಾಲಾಗಿತ್ತು.


**ಮಿದುಳಿನಲ್ಲಿ ರಕ್ತಸ್ರಾವ ತಂದ ಆಪತ್ತು**

ಆ್ಯಂಬುಲೆನ್ಸ್ ಮೂಲಕ ಸಂಜೆ 7 ಗಂಟೆಗೆ ಹಿಮ್ಸ್‌ಗೆ ಬಂದಾಗ ಅವರು ಸಂಪೂರ್ಣ ಕೋಮಾ ಸ್ಥಿತಿಯಲ್ಲಿದ್ದರು. ತಕ್ಷಣವೇ ವೈದ್ಯರು ಸಿಟಿ ಸ್ಕ್ಯಾನ್ ಮಾಡಿದಾಗ ಮಿದುಳಿನಲ್ಲಿ ರಕ್ತ ಸೋರುತ್ತಿರುವುದು ದೃಢಪಟ್ಟಿತು. ಅಪಘಾತದಿಂದ 400 ರಿಂದ 500 ಎಂಎಲ್ ರಕ್ತಸ್ರಾವವಾಗಿತ್ತು. ಮಿದುಳಿನಲ್ಲೂ ರಕ್ತ ಸೋರಿಕೆಯಾಗಿ ಅದು ರಕ್ತದೊತ್ತಡಕ್ಕೆ ಕಾರಣವಾಗಿ ಪ್ರಾಣಕ್ಕೆ ಕುತ್ತು ತರುವ ಸಾಧ್ಯತೆ ಹೆಚ್ಚಿತ್ತು. ತಕ್ಷಣ ಸಮಸ್ಯೆ ಪರಿಹಾರಕ್ಕೆ ಇಂಜೆಕ್ಷನ್ ನೀಡಲಾಯಿತಾದರೂ ಫಲಪ್ರದ ವಾಗಲಿಲ್ಲ. ಆಗ ವೈದ್ಯರು ಸಹ ಮಹಿಳೆಯ » ನಾಲ್ಕನೇ ಪುಟದಲ್ಲಿ

> ಸಿಸೇರಿಯನ್ ಹಾಗು ಮತ್ತೊಂದು ಶಸ್ತ್ರ ಚಿಕಿತ್ಸೆ ಸವಾಲಿನ ಕೆಲಸವಾಗಿತ್ತು. ನಮ್ಮ 15 ವೈದ್ಯರ ತಂಡದ ಸಮಯೋಚಿತ ಕೆಲಸಕ್ಕೆ ಫಲ ಸಿಕ್ಕಿದೆ. ಹಾಸನದಲ್ಲಿ ಇಂತಹ ಶಸ್ತ್ರ ಚಿಕಿತ್ಸೆ ನಡೆದಿರುವುದು ಅಪರೂಪ. ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.
> -ಡಾ|| ಅಮೋಘ್, ನ್ಯುರೋ ಸರ್ಜನ್

# ಉಪ್ಪಿಗಿಂತ ಮೊದಲು ನೀರು

## ಮಹಡ್ ಸತ್ಯಾಗ್ರಹದ ಶತಮಾನೋತ್ಸವ ಯಾಕೆ ಮುಖ್ಯ?



ನಮ್ಮ ಗಣರಾಜ್ಯವು ಮಹಡ್ ಸತ್ಯಾಗ್ರಹದ ಶತಮಾನೋತ್ಸವವದ ಪ್ರಾಮುಖ್ಯತೆಯನ್ನು ಗಣನೆಗೆ ತೆಗೆದುಕೊಂಡು ಆಚರಿಸಬೇಕು. ಅಸ್ಪೃಶ್ಯತೆಯಿಂದ ಮುಕ್ತಿ ಮತ್ತು ಎಲ್ಲರಿಗೂ ಸಮಾನ ಗೌರವ ಸಿಗಬೇಕು ಎಂಬ ಸಂವಿಧಾನದ ಆಶಯ ನಿಜ ಜೀವನದಲ್ಲಿ ಎಷ್ಟರಮಟ್ಟಿಗೆ ಜಾರಿಯಾಗಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲ.

ಒಂದು ಶಾಲೆಯಲ್ಲಿ ಓದುತ್ತಿರುವ ಒಬ್ಬ ಹುಡುಗನನ್ನು ಕಲ್ಪಿಸಿಕೊಳ್ಳಿ. ಅವನಿಗೆ ಬಾಯಾರಿಕೆಯಾಗಿದೆ. ತರಗತಿಯಲ್ಲಿ ಕುಡಿಯುವ ನೀರಿದೆ. ಆದರೆ, ಅವನಿಗೆ ನೀರು ಕುಡಿಯಲು ಸಾಧ್ಯವಿಲ್ಲ. ನೀರು ಕೊಳಕಾಗಿದೆ ಅಂತಲ್ಲ ಅಥವಾ ತರಗತಿಯಲ್ಲಿ ನೀರು ಕುಡಿಯಬಾರದು ಎಂಬ ನಿಯಮವಿದೆ ಅಂತಲ್ಲ. ಅವನಿಗೆ ನೀರು ಕುಡಿಯಲು ಸಾಧ್ಯವಿಲ್ಲ, ಏಕೆಂದರೆ ಅವನಿಗೆ ನೀರು ಕೊಡಬೇಕಾದ ಗುಮಾಸ್ತ ಆ ದಿನ ಶಾಲೆಗೆ ಬಂದಿಲ್ಲ. ಆ ಗುಮಾಸ್ತ ಇಲ್ಲದಿದ್ದರೆ ಆ ಹುಡುಗನ ಕೈಗೆ ನೀರು ಸಿಗುವುದಿಲ್ಲ; ಏಕೆಂದರೆ, ಅವನನ್ನು ಮುಟ್ಟಿದರೆ ನೀರು ಅಪವಿತ್ರವಾಗುತ್ತದೆ ಎಂದು ನಂಬಲಾಗಿತ್ತು.

**ಗುಮಾಸ್ತ ಇಲ್ಲ, ನೀರು ಇಲ್ಲ:** ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರ ಬಾಲ್ಯವನ್ನು ಇಂತಹ ಕ್ರೂರ ನಿಯಮಗಳೇ ಆಳಿದ್ದವು. ಅವರು ತಮ್ಮ ಆತ್ಮಕಥೆಯಂತಿರುವ ವೇಟಿಂಗ್ ಫಾರ್ ಎ ವೀಸಾ ಮತ್ತು ನೋ ಪಿಯೋನ್, ನೋ ವಾಟರ್ ಎಂಬ ಬರಹಗಳಲ್ಲಿ ಈ ನೋವನ್ನು ಬಹಳ ಸ್ಪಷ್ಟವಾಗಿ ವಿವರಿಸಿದ್ದಾರೆ. ಒಮ್ಮೆ ಅವರು ತಮ್ಮ ಒಡಹುಟ್ಟಿದವರೊಂದಿಗೆ ತಂದೆಯನ್ನು ಭೇಟಿಯಾಗಲು ಹೋಗುವಾಗ, ರೈಲ್ವೆ ನಿಲ್ದಾಣದಲ್ಲಿ ವಿಪರೀತ ಬಾಯಾರಿಕೆಯಾಗಿತ್ತು. ಆದರೆ, ಅವರಿಗೆ ಯಾರೂ ನೀರು ಕೊಡಲಿಲ್ಲ. ಅವರು ಮರ್ಹ ಸಮುದಾಯಕ್ಕೆ ಸೇರಿದವರು, ಅಂದರೆ ಅಸ್ಪೃಶ್ಯರು. ಸಾರ್ವಜನಿಕ ನಲ್ಲಿಗಳು ಅವರು ಬಳಸುವಂತಿರಲಿಲ್ಲ.

**ಆ ದೃಶ್ಯವನ್ನು ಸ್ವಲ್ಪ ಯೋಚಿಸಿ:** ಬಾಯಾರಿಕೆಯಿಂದ ಬಳಲುತ್ತಿರುವ ಚಿಕ್ಕ ಮಕ್ಕಳು, ಸುತ್ತಲೂ ನೀರಿದೆ, ಆದರೆ ಒಂದು ಗುಟುಕು ನೀರು ಕುಡಿಯಲು ಸಾಧ್ಯವಿಲ್ಲ. ಅದು ಮರುಭೂಮಿಯಲ್ಲಿ ಅಲ್ಲ, ಶಾಲೆಯಲ್ಲಿ. ಬರಗಾಲದಲ್ಲಲ್ಲ, ಎಲ್ಲವೂ ಸಮೃದ್ಧವಾಗಿದ್ದ ಸಮಯದಲ್ಲಿ.

ಆ ಹುಡುಗ ಮುಂದೆ ಬೆಳೆದು ದೊಡ್ಡವನಾದ. ಕೊಲಂಬಿಯಾ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಓದಿದ. ಗ್ರೇಸ್ ಇನ್‌ನಲ್ಲಿ ಕಾನೂನು ಕಲಿತ. ಅಂತಿಮವಾಗಿ ತನ್ನ ಊರಿಗೆ ಮರಳಿ ಬಂದು ನೇರವಾಗಿ ಒಂದು ನೀರಿನ ತೊಟ್ಟಿಯ ಬಳಿ ಹೋದ.

**ಮಹಡ್‌ನಲ್ಲಿ ಏನಾಯಿತು?:** ಮಾರ್ಚ್ 20, 1927 ರಂದು ಅಂಬೇಡ್ಕರ್ ಅವರು ಬಾಂಬೆ ಪ್ರಾಂತ್ಯದ ಕೊಂಕಣದ ಮಹಡ್ ಎಂಬ ಸಣ್ಣ ಪಟ್ಟಣದಲ್ಲಿ ಸಾವಿರಾರು ಜನರ ಮೆರವಣಿಗೆಯನ್ನು ಮುನ್ನಡೆಸಿದರು. ಅವರ ಗುರಿ ಚೌದರ್ ಕೆರೆ (ಸಾರ್ವಜನಿಕ ನೀರಿನ ತೊಟ್ಟಿ). 1923ರಲ್ಲಿ ಬಾಂಬೆ ಶಾಸನಸಭೆ ಬೋಲೆ ನಿರ್ಣಯವನ್ನು ಅಂಗೀಕರಿಸಿ, 1924ರಲ್ಲಿ ಮಹಡ್ ಪುರಸಭೆಯು ಕೆರೆಯನ್ನು ಅಸ್ಪೃಶ್ಯರಿಗಾಗಿ ತೆರೆದಿತ್ತು. ಆದರೆ ಕಾಗದದ ಮೇಲಿನ ನಿರ್ಣಯಕ್ಕೂ, ಬಾಯಾರಿದ ಗಂಟಲಲ್ಲಿ ಇಳಿಯುವ ನೀರಿಗೂ ಬಹಳ ವ್ಯತ್ಯಾಸವಿತ್ತು. ಮೇಲ್ಜಾತಿಯವರು ಆ ನಿರ್ಣಯ ಕೇವಲ ಕಾಗದಕ್ಕಷ್ಟೇ ಸೀಮಿತವಾಗುವಂತೆ ನೋಡಿಕೊಂಡಿದ್ದರು.

ಅಂಬೇಡ್ಕರ್ ಕೆರೆಯ ಬಳಿ ಹೋದರು. ಬಗ್ಗಿ ನೀರು ಕುಡಿದರು.

ಅವರ ಹಿಂದೆಯೇ ಸಾವಿರಾರು ಪುರುಷರು, ಮಹಿಳೆಯರು ಮತ್ತು ಮಕ್ಕಳು ಬಂದರು. ಅವರೆಲ್ಲರೂ ನೀರು ಕುಡಿದರು. ಬಹುಶಃ ತಮ್ಮ ಜೀವನದಲ್ಲಿ ಮೊದಲ ಬಾರಿಗೆ, ಕಳ್ಳತನದಿಂದಲೋ ಅಥವಾ ದಾನವಾಗಿ ಪಡೆದಂತೆ ಅಲ್ಲದೆ, ತಮ್ಮ ಹಕ್ಕಿನಿಂದ ಅವರು ಸಾರ್ವಜನಿಕ ನೀರಿನ ಮೂಲದಿಂದ ನೀರು ಕುಡಿದರು.

ನಂತರ ಹಿಂಸಾಚಾರ ಶುರುವಾಯಿತು. ಅಂಬೇಡ್ಕರ್ ಮತ್ತು ತಂಡದವರು ವೀರೇಶ್ವರ ದೇವಸ್ಥಾನದ ಒಳಗೆ ಹೋಗಲಿದ್ದಾರೆ ಎಂಬ ಸುಳ್ಳು ಸುದ್ದಿ ಹಬ್ಬಿಸಲಾಯಿತು. ಊರಿಗೆ ಮರಳುತ್ತಿದ್ದವರ ಮೇಲೆ, ಎತ್ತಿನ ಬಂಡಿಗಳ ಮೇಲೆ ದಾಳಿ ನಡೆಯಿತು. ಅವರು ನೀರು ಕುಡಿದಿದ್ದರಿಂದ ಕೆರೆ ಮಲಿನವಾಗಿದೆ ಎಂದು ಭಾವಿಸಿ, ಅದನ್ನು ಸಗಣಿ ಮತ್ತು ಗೋಮೂತ್ರದಿಂದ ಶುದ್ಧೀಕರಿಸಲಾಯಿತು. ಮನುಷ್ಯನ ಘನತೆ ತೊಡೆದು ಹಾಕಬಹುದಾದ ಮಲಿನ ವಸ್ತುವೇನೋ ಎಂಬಂತೆ!

ಡಿಸೆಂಬರ್ 1927ರಲ್ಲಿ ಎರಡನೇ ಸಮ್ಮೇಳನಕ್ಕಾಗಿ ಅಂಬೇಡ್ಕರ್ ಮತ್ತೆ ಮಹಡ್‌ಗೆ ಬಂದಾಗ, ಅವರ ಉದ್ದೇಶ ಕೇವಲ ನೀರು ಕುಡಿಯುವುದಾಗಿರಲಿಲ್ಲ. ಡಿಸೆಂಬರ್ 25, 1927ರಂದು, ಆ ಸಮ್ಮೇಳನದಲ್ಲಿ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಡಲಾಯಿತು. ಅದು ಕೇವಲ ಪ್ರತಿಭಟನೆಗಾಗಿ ಮಾಡಿದ ಕೆಲಸವಲ್ಲ; ಬದಲಾಗಿ, ಮುಂದಿನ ಭಾರತದ ಗಣರಾಜ್ಯವು ಪ್ರಾಚೀನ ಗ್ರಂಥಗಳಲ್ಲಿ ಬರೆದಿರುವ ಅಸಮಾನತೆಯ ಮೇಲೆ ಅಲ್ಲ, ಬದಲಿಗೆ ಸಮಾನ ಹಕ್ಕುಗಳ ಮೇಲೆ ನಿಲ್ಲಬೇಕು ಎಂಬ ಘೋಷಣೆಯಾಗಿತ್ತು.

**ಹತ್ತು ವರ್ಷಗಳ ಕಾನೂನು ಹೋರಾಟ:** ಸತ್ಯಾಗ್ರಹದ ನಂತರ ನಡೆದದ್ದು ಅಷ್ಟೇ ಮುಖ್ಯವಾದದ್ದು. ಮಹಡ್‌ನ ಮೇಲ್ಜಾತಿಯವರು ಕೇವಲ ಹಿಂಸೆಗೆ ಇಳಿಯಲಿಲ್ಲ, ಅವರು ಕೋರ್ಟ್‌ಗೂ ಹೋದರು.

ಡಿಸೆಂಬರ್ 12, 1927ರಂದು, ಅಸ್ಪೃಶ್ಯರು ಮತ್ತೆ ಚೌದರ್ ಕೆರೆಯನ್ನು ಬಳಸದಂತೆ ತಡೆಯಾಜ್ಞೆ ಕೋರಿ ಕೋಲಾಬಾ ಜಿಲ್ಲಾ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಡಿಸೆಂಬರ್ 14, 1927ರಂದು ಕೋರ್ಟ್ ತಡೆಯಾಜ್ಞೆ ನೀಡಿತು.

ಸಂವಿಧಾನದ ಮೇಲೆ ನಂಬಿಕೆಯಿದ್ದ ಅಂಬೇಡ್ಕರ್, ಕೋರ್ಟ್ ಆದೇಶವನ್ನು ಗೌರವಿಸಿದರು. ಸಮ್ಮೇಳನ ನಡೆಸಿದರು, ಮನುಸ್ಮೃತಿಯನ್ನು ಸುಟ್ಟರು, ಆದರೆ ಕೆರೆಯ ಹತ್ತಿರ ಹೋಗಲಿಲ್ಲ. ಈ ಕಾನೂನು ಹೋರಾಟ ಹತ್ತು ವರ್ಷಗಳ ಕಾಲ ನಡೆಯಿತು. ಮಹಡ್‌ನಿಂದ ಶುರುವಾಗಿ ಥಾಣೆಯ ಸಹಾಯಕ ನ್ಯಾಯಾಧೀಶರ ಕೋರ್ಟ್‌ವರೆಗೆ ಹೋಯಿತು. ಪ್ರತಿಯೊಂದು ಹಂತದಲ್ಲೂ, ಅಸ್ಪೃಶ್ಯರನ್ನು ಕೆರೆಯಿಂದ ದೂರ ಇಡುವುದು ಒಂದು ಹಳೆಯ ಸಂಪ್ರದಾಯ ಎಂದು ಸಾಬೀತುಪಡಿಸಲು ಮೇಲ್ಜಾತಿಯವರಿಗೆ ಸಾಧ್ಯವಾಗಲಿಲ್ಲ.

ಅಂತಿಮವಾಗಿ ಮಾರ್ಚ್ 17, 1937ರಂದು ಬಾಂಬೆ ಹೈಕೋರ್ಟ್‌ನಲ್ಲಿ ಜಸ್ಟಿಸ್ ಬ್ರೂಮ್‌ಫೀಲ್ಡ್ ಮತ್ತು ಎನ್.ಜೆ. ವಾಡಿಯಾ ಅವರ ಪೀಠ ಈ ತೀರ್ಪು ನೀಡಿತು. ನ್ಯಾಯಾಧೀಶ ಬ್ರೂಮ್‌ಫೀಲ್ಡ್ ಅವರು, ಅಸ್ಪೃಶ್ಯರನ್ನು ಕೆರೆಯಿಂದ ದೂರವಿಡಲು ಯಾವುದೇ ಪಾರಂಪರಿಕ ಹಕ್ಕಿಲ್ಲ. ಕೆರೆಯು ಪುರಸಭೆಗೆ ಸೇರಿದ್ದು, ಅದು ಸಾರ್ವಜನಿಕ ಆಸ್ತಿ. ಅಸ್ಪೃಶ್ಯರಿಗೆ ಅದನ್ನು ಬಳಸುವ ಹಕ್ಕಿದೆ ಎಂದು ಸ್ಪಷ್ಟಪಡಿಸಿದರು.

1927ರಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕ ಕೆರೆಯಲ್ಲಿ ನೀರು ಕುಡಿಯಲು ಮೆರವಣಿಗೆಯನ್ನು ಮುನ್ನಡೆಸಿದರೆ, ಅದು ಅವರ ಹಕ್ಕು ಎಂದು ಸಾಬೀತುಪಡಿಸಲು 1937ರವರೆಗೆ ಕಾಯಬೇಕಾಯಿತು. ಕಾನೂನು ಅಂಬೇಡ್ಕರ್ ಅವರನ್ನು ಗೆಲ್ಲಿಸಿತು, ಆದರೆ ಆ ಹೋರಾಟ ಎಷ್ಟೊಂದು ಕಠಿಣವಾಗಿತ್ತು ಎಂಬುದು ಇಲ್ಲಿ ತಿಳಿಯುತ್ತದೆ.

**ಉಪ್ಪು ಮತ್ತು ನೀರು:** ಮಹಡ್ ಸತ್ಯಾಗ್ರಹದ ಮೂರು ವರ್ಷಗಳ ನಂತರ, ಮಾರ್ಚ್ 12, 1930ರಂದು ಗಾಂಧೀಜಿ ದಂಡಿ ಯಾತ್ರೆಯನ್ನು ಕೈಗೊಂಡರು. ಉಪ್ಪಿನ ಸತ್ಯಾಗ್ರಹವು ಬ್ರಿಟಿಷರ ಆರ್ಥಿಕ ಅಡಿಪಾಯಕ್ಕೆ ಪೆಟ್ಟು ಕೊಟ್ಟು, ಇಡೀ ಜಗತ್ತಿನ ಗಮನ ಸೆಳೆಯಿತು. ನಮ್ಮ ರಾಷ್ಟ್ರೀಯ ಇತಿಹಾಸದಲ್ಲಿ ಅದಕ್ಕೆ ದೊಡ್ಡ ಸ್ಥಾನವಿದೆ, ಅದು ಸರಿಯೂ ಹೌದು. ಆದರೆ, ಈ ಎರಡು ಸತ್ಯಾಗ್ರಹಗಳು ಏನು ಕೇಳಿದವು ಮತ್ತು ಯಾರ ವಿರುದ್ಧ ಕೇಳಿದವು ಎಂಬುದನ್ನು ಗಮನಿಸಿ.

ಉಪ್ಪಿನ ಸತ್ಯಾಗ್ರಹ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯವನ್ನು ಕೇಳಿತು. ಮಹಡ್ ಸತ್ಯಾಗ್ರಹವು ನಮ್ಮದೇ ದೇಶದ ಜನರ ವಿರುದ್ಧದ ಸಮಾನತೆಯನ್ನು ಕೇಳಿತು. ದಂಡಿ ಯಾತ್ರೆಯು ಹೊರಗಿನ ಶತ್ರುವನ್ನು ಗುರುತಿಸಿ, ಭಾರತ ಬಿಟ್ಟು ಹೋಗಿ ಎಂದು ಹೇಳಿತು. ಮಹಡ್ ಯಾತ್ರೆಯು ನಮ್ಮ ಸಮಾಜದ ಒಳಗಿದ್ದ ರೋಗವನ್ನು ಗುರುತಿಸಿ, ಸುಧಾರಿಸಿಕೊಳ್ಳಿ ಎಂದು ಹೇಳಿತು. ಬ್ರಿಟಿಷರ ವಿರುದ್ಧ ಹೋರಾಡಲು ಧೈರ್ಯ ಬೇಕಿತ್ತು, ಆದರೆ ತನ್ನದೇ ನೆರೆಯವರನ್ನು, ತನ್ನದೇ ಸಮುದಾಯದವರನ್ನು ಕಣ್ಣಲ್ಲಿ ಕಣ್ಣಿಟ್ಟು, ನೀವು ನಮ್ಮನ್ನು ಮನುಷ್ಯರಂತೆ ನೋಡಿಲ್ಲ, ಇದನ್ನು ನಾವು ಇನ್ನು ಸಹಿಸುವುದಿಲ್ಲ ಎಂದು ಹೇಳಲು ಅದಕ್ಕಿಂತ ದೊಡ್ಡ ಧೈರ್ಯ ಬೇಕಿತ್ತು.

ಉಪ್ಪಿನ ಸತ್ಯಾಗ್ರಹದ ಮಹತ್ವ ಕಡಿಮೆ ಎಂದು ನಾನು ಹೇಳುತ್ತಿಲ್ಲ, ಆದರೆ ಇಲ್ಲಿ ಒಂದು ಐತಿಹಾಸಿಕ ಅಸಮತೋಲನವಿದೆ, ಅದನ್ನು ಸರಿಪಡಿಸಬೇಕು. ಉಪ್ಪಿನ ಮೇಲಿನ ತೆರಿಗೆ ಬ್ರಿಟಿಷರು ಹೇರಿದ್ದು. ಅವರು ಹೋದ ನಂತರ ಅದನ್ನು ಸುಲಭವಾಗಿ ರದ್ದುಪಡಿಸಬಹುದಾಗಿತ್ತು. ಆದರೆ ಅಸ್ಪೃಶ್ಯತೆ ಬ್ರಿಟಿಷರು ಬಂದಿದ್ದರಿಂದ ಶುರುವಾದದ್ದಲ್ಲ, ಅವರು ಹೋದರೂ ಹೋಗಿಲ್ಲ. ಅದು ಸಾವಿರಾರು ವರ್ಷಗಳಿಂದ ನಮ್ಮ ಸಮಾಜದಲ್ಲಿ ರಕ್ತಗತವಾಗಿದೆ. ಅದನ್ನು ಹೋಗಲಾಡಿಸಲು ಸರ್ಕಾರ ಬದಲಾದರೆ ಸಾಲದು, ಜನರ ಮನಸ್ಸು ಬದಲಾಗಬೇಕು, ಮನುಷ್ಯನನ್ನು ನೋಡುವ ದೃಷ್ಟಿ ಬದಲಾಗಬೇಕು.

ಚೌದರ್ ಕೆರೆಯಲ್ಲಿ ನೀರು ಕುಡಿದ ವ್ಯಕ್ತಿಯೇ ಮುಂದೆ ಭಾರತದ ಸಂವಿಧಾನವನ್ನು ರಚಿಸಿದ್ದು ಆಕಸ್ಮಿಕವೇನಲ್ಲ. ಸಂವಿಧಾನದ ಮೂರನೇ ಭಾಗವು ಮಹಡ್ ಸತ್ಯಾಗ್ರಹದ ಛಾಪನ್ನು ಹೊಂದಿದೆ. ಜಾತಿ ಆಧಾರಿತ ತಾರತಮ್ಯವನ್ನು ನಿಷೇಧಿಸುವ ಮತ್ತು ಕೆರೆಗಳು, ಸಾರ್ವಜನಿಕ ಸ್ಥಳಗಳಿಗೆ ಎಲ್ಲರಿಗೂ ಪ್ರವೇಶ ನೀಡುವ ಕಲಂ 15 ನೋಡಿದರೆ, ಅಂಬೇಡ್ಕರ್ ಅವರ ಕಣ್ಣ ಮುಂದೆ ಚೌದರ್ ಕೆರೆಯೇ ಇತ್ತೇನೋ ಎನಿಸುತ್ತದೆ. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವ ಕಲಂ 17, ಮಹಡ್ ಸತ್ಯಾಗ್ರಹದ ಸಾಂವಿಧಾನಿಕ ರೂಪವಾಗಿದೆ.

ದಂಡಿ ಯಾತ್ರೆಯು ಭಾರತಕ್ಕೆ ಸ್ವರಾಜ್ಯದ ಕನಸನ್ನು ನೀಡಿದರೆ, ಮಹಡ್ ಸಮಾನತೆಯ ವ್ಯಾಕರಣವನ್ನು ಕಲಿಸಿತು. ಸ್ವಾತಂತ್ರ್ಯವನ್ನು ಬಹಳ ಮಂದಿ ಬರೆಯಬಹುದಿತ್ತು, ಆದರೆ ಸಮಾನತೆಯ ವ್ಯಾಕರಣವನ್ನು ಬರೆಯಲು ಬಾಲ್ಯದಲ್ಲಿ ನೀರು ಕುಡಿಯಲು ನಿರಾಕರಿಸಲ್ಪಟ್ಟ ಒಬ್ಬ ವ್ಯಕ್ತಿಯಿಂದ ಮಾತ್ರ ಸಾಧ್ಯವಿತ್ತು.

**ಶತಮಾನೋತ್ಸವದ ಮಹತ್ವ:** ಮಹಡ್ ಸತ್ಯಾಗ್ರಹದ 100ನೇ ವರ್ಷ ಮಾರ್ಚ್ 20, 2027ಕ್ಕೆ ಬರುತ್ತದೆ. ನಾವು ಈಗ 99ನೇ ವರ್ಷದಲ್ಲಿದ್ದೇವೆ. ಈ ಗಣರಾಜ್ಯಕ್ಕೆ ತನ್ನ ಮೂಲದ ಬಗ್ಗೆ ಸ್ವಲ್ಪವಾದರೂ ನೆನಪಿದ್ದರೆ, ಸಂವಿಧಾನವನ್ನು ಕೊಟ್ಟ ಹೋರಾಟದ ಬಗ್ಗೆ ಗೌರವವಿದ್ದರೆ, ಈ ಶತಮಾನೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಬೇಕು.

ಮಾರ್ಚ್ 20, 2026ರಿಂದ ಮಾರ್ಚ್ 20, 2027ರವರೆಗೆ ಒಂದು ವರ್ಷದ ಕಾಲ ಈ ಶತಮಾನೋತ್ಸವ ನಡೆಯಬೇಕು ಎಂದು ನಾನು ಪ್ರಸ್ತಾಪಿಸುತ್ತೇನೆ. ಚೌದರ್ ಕೆರೆಯ ಬಳಿ ಒಂದು ದೊಡ್ಡ ಸಭೆ ಸೇರಬೇಕು. ಎಲ್ಲ ಜಾತಿ, ಮತ, ಪಂಗಡದ ಜನರು ಅಲ್ಲಿಗೆ ಬಂದು ಒಟ್ಟಿಗೆ ನೀರು ಕುಡಿಯಬೇಕು. ಇದು ಒಂದು ಸಾಂವಿಧಾನಿಕ ಪುನರ್-ದೀಕ್ಷೆಯಾಗಲಿ: ಹುಟ್ಟಿನ ಕಾರಣದಿಂದ ಯಾವುದೇ ಭಾರತೀಯನು ಕೀಳು ಎಂದು ಪರಿಗಣಿಸಲ್ಪಡುವುದಿಲ್ಲ ಎಂಬ ಪ್ರತಿಜ್ಞೆಯನ್ನು ಮತ್ತೆ ತೆಗೆದುಕೊಳ್ಳೋಣ.

ಆದರೆ ಇದು ಕೇವಲ ಸಮಾರಂಭಗಳಿಗೆ ಮಾತ್ರ ಸೀಮಿತವಾಗಬಾರದು. ಈ ವರ್ಷ ಆತ್ಮಾವಲೋಕನದ ವರ್ಷವಾಗಲಿ. ಇಂದಿಗೂ ಗ್ರಾಮೀಣ ಭಾರತದ ಸರ್ಕಾರಿ ಶಾಲೆಯೊಂದರಲ್ಲಿ ಓದುತ್ತಿರುವ ದಲಿತ ಹುಡುಗ, ಆದಿವಾಸಿ ಹುಡುಗಿ ಅಥವಾ ಸ್ವಚ್ಛತಾ ಕಾರ್ಮಿಕರ ಮಗಳು ನಿಜವಾಗಿಯೂ ಆ ಗುಮಾಸ್ತ ಇಲ್ಲ, ನೀರು ಇಲ್ಲ ಎಂಬ ಭೀತಿಯಿಂದ ಮುಕ್ತರಾಗಿದ್ದಾರೆಯೇ? ಅಥವಾ ಆ ತಾರತಮ್ಯ ಈಗ ಬೇರೆ ರೂಪದಲ್ಲಿ ಮುಂದುವರಿಯುತ್ತಿದೆಯೇ ಎಂದು ನಾವು ಪ್ರಶ್ನಿಸಿಕೊಳ್ಳೋಣ.

ನಮ್ಮ ಚರಂಡಿಗಳನ್ನು ಬರಿಗೈಯಲ್ಲಿ ಸ್ವಚ್ಛಗೊಳಿಸುವ ಕಾರ್ಮಿಕನಿಗೂ, ಚೌದರ್ ಕೆರೆಯಲ್ಲಿ ನೀರು ಕುಡಿಯಲು ಬಿಡದಿದ್ದ ಅಸ್ಪೃಶ್ಯರಿಗೂ ಏನಾದರೂ ವ್ಯತ್ಯಾಸವಿದೆಯೇ ಎಂದು ಕೇಳಿಕೊಳ್ಳೋಣ. ಸಂವಿಧಾನವು ನಿಜವಾಗಿಯೂ ಜನರ ಜೀವನದ ಭಾಗವಾಗಿದೆಯೇ ಎಂದು ಯೋಚಿಸೋಣ.

ಈ ಶತಮಾನೋತ್ಸವವು ತಳಸಮುದಾಯದ, ಶೋಷಿತರ ಮತ್ತು ಎಲ್ಲರಿಗೂ ಸಮಾನ ಹಕ್ಕನ್ನು ಕೇಳುವ ದನಿಯಾಗಲಿ. ಅಂಬೇಡ್ಕರ್ ಕೇವಲ ಸಂವಿಧಾನವನ್ನು ಬರೆಯಲಿಲ್ಲ. ಸಣ್ಣ ಪಟ್ಟಣದ ಒಂದು ಕೆರೆಯಲ್ಲಿ ನೀರು ಕುಡಿಯುವ ಮೂಲಕ, ತಾವು ಯಾರಿಗಾಗಿ ಸಂವಿಧಾನ ಬರೆಯುತ್ತಿದ್ದಾರೋ ಅವರೂ ಮನುಷ್ಯರೇ ಎಂದು ಮೊದಲು ತೋರಿಸಿಕೊಟ್ಟರು. ಆ ಕೆಲಸ, ದಂಡಿ ಯಾತ್ರೆಗಿಂತಲೂ ಆಳವಾದದ್ದು.

ಭಾರತದಲ್ಲಿ ಸಮಾನತೆ ಎಂಬುದು ಇನ್ನೂ ಸಾಕಾರಗೊಂಡಿಲ್ಲ. ಶತಮಾನೋತ್ಸವ ಹತ್ತಿರ ಬರುತ್ತಿದೆ. ನಾವು ಮರೆತುಹೋಗದಂತೆ ಗಣರಾಜ್ಯವು ನೆನಪಿಸಿಕೊಳ್ಳಲಿ.

**– ಸಂಜಯ್** ಹೆಗ್ಡೆ

### ಅಂಬೇಡ್ಕರ್ ಕೆರೆಯ ಬಳಿ ಹೋದರು. ಬಗ್ಗಿ ನೀರು ಕುಡಿದರು.

- **ಅವರ ಹಿಂದೆಯೇ ಸಾವಿರಾರು ಪುರುಷರು, ಮಹಿಳೆಯರು ಮತ್ತು ಮಕ್ಕಳು ಬಂದರು. ಅವರೆಲ್ಲರೂ ನೀರು ಕುಡಿದರು.**
- **ಬಹುಶಃ ತಮ್ಮ ಜೀವನದಲ್ಲಿ ಮೊದಲ ಬಾರಿಗೆ, ಕಳ್ಳತನದಿಂದಲೋ ಅಥವಾ ದಾನವಾಗಿ ಪಡೆದಂತೆ ಅಲ್ಲದೆ, ತಮ್ಮ ಹಕ್ಕಿನಿಂದ ಅವರು ಸಾರ್ವಜನಿಕ ನೀರಿನ ಮೂಲದಿಂದ ನೀರು ಕುಡಿದರು.**
- **ನಂತರ ಹಿಂಸಾಚಾರ ಶುರುವಾಯಿತು.**
- **ಅಂಬೇಡ್ಕರ್ ಮತ್ತು ತಂಡದವರು ವೀರೇಶ್ವರ ದೇವಸ್ಥಾನದ ಒಳಗೆ ಹೋಗಲಿದ್ದಾರೆ ಎಂಬ ಸುಳ್ಳು ಸುದ್ದಿ ಹಬ್ಬಿಸಲಾಯಿತು.**
- **ಊರಿಗೆ ಮರಳುತ್ತಿದ್ದವರ ಮೇಲೆ, ಎತ್ತಿನ ಬಂಡಿಗಳ ಮೇಲೆ ದಾಳಿ ನಡೆಯಿತು.**
- **ಅವರು ನೀರು ಕುಡಿದಿದ್ದರಿಂದ ಕೆರೆ ಮಲಿನವಾಗಿದೆ ಎಂದು ಭಾವಿಸಿ, ಅದನ್ನು ಸಗಣಿ ಮತ್ತು ಗೋಮೂತ್ರದಿಂದ ಶುದ್ಧೀಕರಿಸಲಾಯಿತು.**
- **ಮನುಷ್ಯನ ಘನತೆ ತೊಡೆದು ಹಾಕಬಹುದಾದ ಮಲಿನ ವಸ್ತುವೇನೋ ಎಂಬಂತೆ!**
- **ಡಿಸೆಂಬರ್ 1927ರಲ್ಲಿ ಎರಡನೇ ಸಮ್ಮೇಳನಕ್ಕಾಗಿ ಅಂಬೇಡ್ಕರ್ ಮತ್ತೆ ಮಹಡ್‌ಗೆ ಬಂದಾಗ, ಅವರ ಉದ್ದೇಶ ಕೇವಲ ನೀರು ಕುಡಿಯುವುದಾಗಿರಲಿಲ್ಲ.**
- **ಡಿಸೆಂಬರ್ 25, 1927ರಂದು, ಆ ಸಮ್ಮೇಳನದಲ್ಲಿ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಡಲಾಯಿತು.**
- **ಅದು ಕೇವಲ ಪ್ರತಿಭಟನೆಗಾಗಿ ಮಾಡಿದ ಕೆಲಸವಲ್ಲ; ಬದಲಾಗಿ, ಮುಂದಿನ ಭಾರತದ ಗಣರಾಜ್ಯವು ಪ್ರಾಚೀನ ಗ್ರಂಥಗಳಲ್ಲಿ ಬರೆದಿರುವ ಅಸಮಾನತೆಯ ಮೇಲೆ ಅಲ್ಲ, ಬದಲಿಗೆ ಸಮಾನ ಹಕ್ಕುಗಳ ಮೇಲೆ ನಿಲ್ಲಬೇಕು ಎಂಬ ಘೋಷಣೆಯಾಗಿತ್ತು.**

**» ದೇವರು ಎಲ್ಲಾ ಕೊಟ್ಟಿದ್ದಾನೆ ಆದರೂ ಖಾಲಿ. ಯಾರಿಗೆ ನಮ್ಮ ಕೊಡ ತುಂಬಿತ್ತು ಅಂತ ಅನಿಸುತ್ತದೆ. ನಮ್ಮ ಮನಸ್ಸು ಈ ಕೊಡದಂತೆ ಇದೆ. ಮಾವ ಕೊಟ್ಟರೂ ಸರಿ. ಸರ್ಕಾರ ಕೊಟ್ಟರೂ ಸರಿ. ಅವರಿವರು ಕೊಟ್ಟರು ಸರಿ, ಆ ಮನಸ್ಸು ತುಂಬುವುದಿಲ್ಲ. ನಮಗೆ ಎಲ್ಲಾ ಕಡೆಯಿಂದ ಸಹಾಯ ಬರುತ್ತದೆ. ಆದರೆ ತುಂಬುತ್ತದೆ ಏನು?. ಮನುಷ್ಯನ ಮನಸ್ಸಿನ ಗಡಿಗೆ ಇನ್ನೂ ತುಂಬಿಲ್ಲ. ಸಾಕಪ್ಪ ನನಗೆ ಆನಂದ ಆಯ್ತು ಅಂತ ಹೇಳ್ಯಾರೇನು? ಯೋಚಿಸಿ. ನಮ್ಮ ಬುದ್ಧಿ ಇರೋದು ಏತಕ್ಕೆ?. ವಿಚಾರ ಮಾಡೋದಿಕ್ಕೆ. ವಿಚಾರ ಮಾಡಿ ಗೊತ್ತಾಗುತ್ತೆ. ಇನ್ನು ತುಂಬಿಲ್ಲ. ಈಗ ಒಂದು ಲಕ್ಷ ವೇತನ ಇದ್ದರೂ ಸಾಲೋದಿಲ್ಲ.**

# ಸಂಖ್ಯಾ ಬಡವರು

ಇಂದು ನಾವು ಸಂಖ್ಯಾ ಬಡವರು ಎಂದರೇನು? ನೋಡೋಣ. ಬಡವರೆಂದರೆ ಗೊತ್ತು. ಹಾಗಾದರೆ ಸಂಖ್ಯಾ ಬಡವರ ಬಗ್ಗೆ ನೋಡೋಣ. ನಾವೆಲ್ಲರೂ ಸಂಖ್ಯಾ ಬಡವರೇ. ಯಾವ ಒಂದು ಗಿಡ, ಪಕ್ಷಿಯು ಬಡವ ಅಂತ ಹೇಳುವುದಿಲ್ಲ. ಆದರೆ ಮನುಷ್ಯ ಮಾತ್ರ ಬಡವ ಅಂತ ಹೇಳುತ್ತಾನೆ. ಇದು ಏನನ್ನು ತೋರಿಸುತ್ತದೆ ಅಂದರೆ, ಮನುಷ್ಯನಲ್ಲಿ ಬದುಕುವ ಕಲೆ ಇಲ್ಲ.

ಯಾವುದಕ್ಕೆ ಮಹತ್ವ ಕೊಡಬೇಕು?. ಯಾವುದಕ್ಕೆ ಮಹತ್ವ ಕೊಡಬಾರದು?. ಅನ್ನೋದು ಇನ್ನೂ ಪಕ್ಕಾ ಗೊತ್ತಾಗಿಲ್ಲ. ಮನುಷ್ಯ ಜಾಣ ಇದ್ದಾನೆ. ಈ ಮಾತು ಬೇರೆ. 10 ಡಾಕ್ಟರೇಟ್ ತೆಗೆದುಕೊಂಡಿದ್ದಾನೆ. ಆದರೆ ಹೇಗೆ ಬದುಕಬೇಕು?. ಹೇಗೆ ಬದುಕನ್ನು ಶ್ರೀಮಂತ ಮಾಡಬೇಕು? ಗೊತ್ತಿಲ್ಲ. ನಾವೇನು ಸಂಬಳ ಪಡೆದುಕೊಳ್ಳುತ್ತೇವೆ? ಅದು ಕಲಿತ ಶಿಕ್ಷಣದ ಬೆಲೆ. ಒಬ್ಬ ನೆಲಗಾರ, ಹೂಗಂಟಿಗೆ ಕೇಳಿದ ನಿನ್ನ ಬೆಲೆ ಎಷ್ಟು ಅಂದನು. ಅದಕ್ಕೆ ಹೂಗಂಟಿ ಹೇಳಿತು ನನಗೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ, ಯಾಕೆಂದರೆ ನಾನಿಲ್ಲ ಅಂದರೆ ನೀವೆಲ್ಲ ಬಡವರು. ನಿಮ್ಮ ಸೌಂದರ್ಯ ಹೆಚ್ಚಿಸುವವ ನಾನು. ದೇವರ ಸೌಂದರ್ಯ ಹೆಚ್ಚಿಸುವವ ನಾನು. ನಾನು ಎಷ್ಟು ಅದ್ಭುತ ಮಾಡುತ್ತೇನೆ? ಜಗತ್ತಿನಲ್ಲಿ. ಅದಕ್ಕೆ ಅದರ ಬೆಲೆ, ಭಾವ ಇಲ್ಲ. ಆದರೆ ನಮಗೆ ನಮ್ಮ ಬೆಲೆ, ಭಾವ ಇದೆ. ಕೈಯಿದೆ, ಕಾಲಿದೆ, ಕಣ್ಣಿದೆ, ಕಿವಿಯಿದೆ, ಮೂಗಿದೆ, ನಾಲಿಗೆ ಇದೆ, ಮನಸ್ಸಿದೆ, ಬುದ್ಧಿಯಿದೆ. ಎಲ್ಲಾ ಇಟ್ಟುಕೊಂಡು ನಾನು ಬಡುವ. ಹೊರಗೆ ಜಗತ್ತಿದೆ. ಪ್ರಾಣಿ, ಪಕ್ಷಿಗಳಿವೆ. ಹಚ್ಚ ಹಸಿರಾದ ಮಹಾವಿಶ್ವ ಇದೆ. ಇಷ್ಟೆಲ್ಲ ಇದ್ದರೂ ಸಹಿತ ನಾನು ಬಡವ. ಯಾಕೆ?.

ನನ್ನನ್ನು ಅಳೆಯುವುದು ಸಂಖ್ಯೆ. ಸಂಖ್ಯೆ 50 ಲಕ್ಷ, 2 ಲಕ್ಷ, ಅವು ನಮ್ಮನ್ನು ಅಳೆಯುತ್ತದೆ. ಸಂಖ್ಯೆಯಿಂದ ಅಳೆದರೆ ಸಂಖ್ಯೆಗೆ ಕೊನೆ ಇರುವುದಿಲ್ಲ. ಒಂದು ಲಕ್ಷ,+1 ಆಗ ಒಂದು ಲಕ್ಷ ಕಡಿಮೆ ಆಯಿತು. ನಿಮಗೆ ಬೇಕಾದ ಒಂದು ದೊಡ್ಡ ಸಂಖ್ಯೆ ಇಡಿ ಅದರ ಮುಂದೆ +1 ಮಾಡಲಾಗುತ್ತದೆ. ಅಧಿಕ ಒಂದು ಆದರೆ ಅದು ಸಣ್ಣದಾಗುತ್ತದೆ. ಅಂದರೆ ಏನು ಗಳಿಸಿದರೂ ಬಡತನ ಬಿಡುವುದಿಲ್ಲ. ಎಣಿಕೆಯಲ್ಲಿ. ಒಬ್ಬರಿಗೆ ಒಂದು ಲಕ್ಷ, ಇನ್ನೊಬ್ಬರಿಗೆ 90 ಸಾವಿರ ಇದೆ ಅಂದರೆ 10,000 ಕಡಿಮೆ. ಹೀಗೆ ಹೋಲಿಸುತ್ತಾ ಹೋದರೆ ಒಬ್ಬರು ಸಿರಿವಂತರು, ಇನ್ನೊಬ್ಬರು ಬಡವರು ಇರುತ್ತಾರೆ.

ಒಬ್ಬರ ಮನೆಯಲ್ಲಿ ಬಹಳ ಫರ್ನಿಚರ್ ಇರುತ್ತದೆ. ಅವರು ಫರ್ನಿಚರ್ ಶ್ರೀಮಂತರು. ಇನ್ನೊಬ್ಬರು ದೊಡ್ಡ ಮನೆ ಕಟ್ಟಿದ್ದರೆ ಅವರು ದೊಡ್ಡ ಮನೆ ಶ್ರೀಮಂತರು. ಅದನ್ನು ನೋಡಿದರೆ ನಮ್ಮ ಮನೆ ಅಷ್ಟಿಲ್ಲ. ಅವರ ಕೊಠಡಿ, 68=48 ಅಡಿ. ನಮ್ಮ ಕೊಠಡಿ 57=35ಅಡಿ. 13ಅಡಿ ಕಡಿಮೆಯಾಯಿತು. ನಾವು 13 ಅಡಿ ಬಡವರು. ಹೀಗೆ ಸಂಖ್ಯೆ ಮೇಲೆ ಬಡತನ, ಶ್ರೀಮಂತಿಕೆ. ಅಳತೆ ಮಾಡುತ್ತ ಹೋದರೆ ಯಾವ ಮನುಷ್ಯನು ಶ್ರೀಮಂತ ಆಗುವುದಿಲ್ಲ. ಆದುದರಿಂದ ಮನುಷ್ಯರಲ್ಲಿ ಕೊರತೆಯ ಭಾವ.

ಯಾಕೆ ಇಷ್ಟು ಹೋರಾಟ ಮಾಡುತ್ತೀವಿ?. ಒಂದು ಇದ್ದವ ಎರಡನ್ನು ಮಾಡುತ್ತಾನೆ, ಮೂರು ಮಾಡುತ್ತಾನೆ, ನಾಲ್ಕು ಮಾಡುತ್ತಾನೆ. ಒಂದು ಊರಲ್ಲಿ ಒಬ್ಬ ಬಡವ ಇದ್ದನು. ಆತ ಕೂಲಿ ಮಾಡಿಕೊಂಡಿದ್ದ. ಜೀವಮಾನವೆಲ್ಲ ಕೂಲಿಯಲ್ಲಿ ದುಡಿದು ದುಡಿದು, ಉಳಿಸಿ ಉಳಿಸಿ ನೂರು ಎಕರೆ ಜಮೀನು ತೆಗೆದುಕೊಂಡನು. ಆತನಿಗೆ ನಾಲ್ಕು ಮಂದಿ ಮಕ್ಕಳು. ಸಾಯುವ ಕ್ಷಣ ಬಂದಿತ್ತು. ಮಕ್ಕಳು ಅಪ್ಪನಿಗೆ ನಿಮ್ಮ ಕಡೆಯ ಆಸೆ ಏನು? ಅಂತ ಕೇಳಿದರು. ಆತ ಹೇಳಿದ, ನನ್ನ ಆಸೆ ಒಂದಿದೆ. ನಾನು ಸಣ್ಣವನಿದ್ದಾಗ ಅತ್ಯಂತ ಬಡವ. ಕಷ್ಟಪಟ್ಟು ಬೆಳೆಸುತ್ತಾ ಬೆಳೆಸುತ್ತಾ, ನೂರು ಎಕರೆ ಮಾಡಿದ್ದೇನೆ. ಅದಕ್ಕೆ ಮಕ್ಕಳು ಹೌದು, ನಮ್ಮನ್ನು ಶ್ರೀಮಂತ ಮಾಡಿದ್ದೀಯಲ್ಲ ಸಂತೋಷ ಅಂದ್ರು. ಆಗ ಮುದುಕ ಹೇಳಿದ್ದ ಹಾಗಲ್ಲ, ಇನ್ನೂ ಸಮೀಪದಲ್ಲಿ ಏನೇನೋ ಹೊಲಗಳಿದ್ದವಲ್ಲ ಅವುಗಳೆಲ್ಲವನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆ ಇತ್ತು. ಆದರೆ ಏನು ಮಾಡೋದು ನಾನು ಹೊರಟುಬಿಟ್ಟಿದ್ದೇನೆ. ನೀವು ಅದನ್ನು ಪೂರ್ಣ ಮಾಡುತ್ತೇನೆ ಅಂತ ಮಾತು ಕೊಡಿ ಅಂದನು. ಅಂದರೆ ನೂರು ಎಕರೆ ಮಾಡಿದರು ಸಮಾಧಾನ ಆಗಲಿಲ್ಲ. ಯಾಕೆ ಅಂದರೆ ಬಡತನ ಒಳಗೆ ಇತ್ತು. ಅಂದರೆ ಹೊರಗೆ ಎಷ್ಟಾದರೇನು ಸಂಖ್ಯಾ ಬಡತನ. ಏನು ಇಲ್ಲದ್ದು ನೂರಾಯ್ತಲ್ಲ ಅಂತ ವಿಚಾರ ಮಾಡಲಿಲ್ಲ. ಪಕ್ಕದಲ್ಲಿದ್ದವಲ್ಲ ಅವನು ತೆಗೆದುಕೊಂಡಿಲ್ಲವಲ್ಲ ಅಂತ ವಿಚಾರ ಮಾಡಿದ್ದನು. ಈತನೇ ಹೋದ ಮೇಲೇ ಅವುಗಳನ್ನು ತೆಗೆದುಕೊಂಡರೇನು? ಬಿಟ್ಟರೇನು?. ತನಗೇನು ಲಾಭವಿಲ್ಲ ಆದರೂ ಮನುಷ್ಯ ಸಾಯುವಾಗಲು ನಾನು ಸಿರಿವಂತನಾಗಬೇಕು ಅಂತ ಆಸೆ. ಹಾಗಂದರೇನು? ನಾನಿನ್ನೂ ಬಡವ ಇದ್ದೀನಿ ಅಂತ. ನೂರು ಎಕರೆ ಮಾಡಿದ್ದು ಸಹಿತ ಬಡತನ ಹೋಗಲಿಲ್ಲ, ಯಾಕೆ ಅಂದರೆ ಒಳಗೆ ಬಡತನ ಇದೆ. ಸಾವಿರ ಎಕರೆ ಮಾಡಿದರೇನು?. ಕೋಟಿ ಎಕರೆ ಮಾಡಿದರೇನು?. ಬಡತನ ಒಳಗೆ ತುಂಬಿತ್ತು ಅಂದರೆ ಏನು ಮಾಡಲು ಆಗುವುದಿಲ್ಲ.

ಹಿಂದೆ ಊರಿನ ಜಾತ್ರೆಯಲ್ಲಿ ಒಂದು ಹೊಸ ಮಣ್ಣಿನ ಗಡಿಗೆ ನೆಲದಲ್ಲಿ ಹಾಕುತ್ತಿದ್ದರು. ಅದಕ್ಕೆ ಎಷ್ಟು ನೀರು ಹಾಕಿದರು ತುಂಬುತ್ತಲೆ ಇರಲಿಲ್ಲ, ಬೇಕಾದಷ್ಟು ಕೊಡಗಟ್ಟಲೆ ಹಾಕಿ. ಅದು ತುಂಬುತ್ತಿರಲಿಲ್ಲ ಏಕೆಂದರೆ. ಆ ಗಡಿಗೆ ತಳ ಭಾಗ ಸುಡುತ್ತಿರಲಿಲ್ಲ, ಅದು ನೀರಿಗೆ ಕರಗಿ ಹೋಗಿ, ಮೇಲೆ ಹಾಕಿದ ನೀರೆಲ್ಲ ಭೂಮಿ ಸೇರುತ್ತಿತ್ತು. ಅದು ಖಾಲಿನೇ ಇರುತ್ತಿತ್ತು. ಇದಕ್ಕೆ ಪವಾಡ ಅನ್ನುತ್ತಿದ್ದರು. ಇದನ್ನು ಪಾಠ ಕಲಿಸಲು ಮಾಡುತ್ತಿದ್ದರು. ನಿನಗೆ ಎಷ್ಟು ಕೊಟ್ಟರು ಸಹಿತ ಖಾಲಿ. ದೇವರು ಎಲ್ಲಾ ಕೊಟ್ಟಿದ್ದಾನೆ ಆದರೂ ಖಾಲಿ. ಯಾರಿಗೆ ನಮ್ಮ ಕೊಡ ತುಂಬಿತ್ತು ಅಂತ ಅನಿಸುತ್ತದೆ. ನಮ್ಮ ಮನಸ್ಸು ಈ ಕೊಡದಂತೆ ಇದೆ. ಮಾವ ಕೊಟ್ಟರೂ ಸರಿ. ಸರ್ಕಾರ ಕೊಟ್ಟರೂ ಸರಿ. ಅವರಿವರು ಕೊಟ್ಟರು ಸರಿ, ಆ ಮನಸ್ಸು ತುಂಬುವುದಿಲ್ಲ. ನಮಗೆ ಎಲ್ಲಾ ಕಡೆಯಿಂದ ಸಹಾಯ ಬರುತ್ತದೆ. ಆದರೆ ತುಂಬುತ್ತದೆ ಏನು?. ಮನುಷ್ಯನ ಮನಸ್ಸಿನ ಗಡಿಗೆ ಇನ್ನೂ ತುಂಬಿಲ್ಲ. ಸಾಕಪ್ಪ ನನಗೆ ಆನಂದ ಆಯ್ತು ಅಂತ ಹೇಳ್ಯಾರೇನು? ಯೋಚಿಸಿ. ನಮ್ಮ ಬುದ್ಧಿ ಇರೋದು ಏತಕ್ಕೆ?. ವಿಚಾರ ಮಾಡೋದಿಕ್ಕೆ. ವಿಚಾರ ಮಾಡಿ ಗೊತ್ತಾಗುತ್ತೆ. ಇನ್ನು ತುಂಬಿಲ್ಲ. ಈಗ ಒಂದು ಲಕ್ಷ ವೇತನ ಇದ್ದರೂ ಸಾಲೋದಿಲ್ಲ. ಯಾಕೆ? ಅಂದರೆ ಗಡಿಗೆ ತುಂಬಿಲ್ಲ. ಮನಸ್ಸೇ ಈ ಗಡಿಗೆಯಂತಾದರೆ ಯಾರು ನಮ್ಮನ್ನು ಶ್ರೀಮಂತ ಮಾಡೋದಿಲ್ಲ. ಮಾವ ಅಳಿಯನಿಗೆ ಎಲ್ಲಾ ಕೊಟ್ಟಿರುತ್ತಾನೆ. ಮನೆ ಕಟ್ಟಿಕೊಟ್ಟಿರುತ್ತಾನೆ. ಯಾರು ಕಟ್ಟಿಕೊಟ್ಟಿದ್ದು ಅಂದರೆ ಮಾವ ಬರೀ ಮನೆ ಕಟ್ಟಿಕೊಟ್ಟಿದ್ದಾನೆ, ಇದರ ಜೊತೆ ಒಂದು ಬೈಕ್ ಕೊಟ್ಟಿದರೆ ಆಗುತ್ತಿತ್ತು ಅಂತ ಅನ್ನುತ್ತಾನೆ. ಮನೆ ಅಂದ ಬಳಿಕ ಗಾಡಿ ಬೇಡವೆ ಅಂತಾನೆ. ಹಾಗೆ ಹೇಳುತ್ತಾ ಮಾವನ ಮನೆಗೆ ಹೋಗಿ ಕುಳಿತ. ಗಾಡಿ ಕೊಡುವ ತನಕ ಹೋಗುವುದಿಲ್ಲ ಅಂದ. ಮಾವ ಹೇಳಿದ ಈ ಭಿಕ್ಷುಕನಿಗೆ ಮಗಳು ಕೊಡುವುದಕ್ಕಿಂತ ತಾಜಾ ಭಿಕ್ಷುಕನಿಗೆ ಕೊಟ್ಟಿದ್ದರೆ ಚೆನ್ನಾಗಿತ್ತು ಅಂದ. ಏನು ಇರುವುದಿಲ್ಲ ಬಿಕ್ಷುಕ. ಹಾಡಿಕೊಂಡು ಹೊರಟಿರುತ್ತಾನೆ. ಕೊನೆಗೆ ಬೇಸತ್ತು ಗಾಡಿ ತೆಗೆದುಕೊಂಡು ಹೋಗು ಅಂತ ಮಾವ ಅಳಿಯನಿಗೆ ಹಣ ಕೊಟ್ಟ. ಅದಕ್ಕೆ ಪೆಟ್ರೋಲ್ ಬೇಕಲ್ಲ ಆಗ ಹೆಂಡತಿಗೆ ಹೇಳಿದ. ನಿಮ್ಮ ತಂದೆ ಮನೆಗೆ ಹೋಗು. ವರ್ಷಕ್ಕೆ ಎಷ್ಟು ಪೆಟ್ರೋಲ್ ಬೇಕು ಅಷ್ಟು ಮತ್ತು ಅದರ ಬಡ್ಡಿಗೆ ಆಗುವಂತೆ ಪಡೆದುಕೊಂಡು ಬಾ ಅಂದನು. ಈತ ಶ್ರೀಮಂತ ಅಳಿಯನೇನು. ಇಂತಹವರಿಗೆ ಹೆಣ್ಣು ಕೊಟ್ಟರೆ ಬಡತನ ಅನುಭವಿಸಬೇಕೇ ವಿನಹ ಶ್ರೀಮಂತಿಕೆಯನ್ನಲ್ಲ.

ಎಷ್ಟೇ ಇರಲಿ ಅಷ್ಟರಲ್ಲಿ ಮಜಾದಲ್ಲಿರಬೇಕು. ಪ್ರಾಣಿಗಳಿಗೆ ಏನೂ ಇರುವುದಿಲ್ಲ. ಎಷ್ಟು ಚೆನ್ನಾಗಿ ಬದುಕುತ್ತವೆ. ಪ್ರಾಣಿಗಳು ಏನು ಬ್ಯಾಂಕಲ್ಲಿ ಹಣ ಇಟ್ಟಿದ್ದಾವೆ ಏನು?. ಯಾವುದಾದರೂ ಹೊಲ ತೆಗೆದುಕೊಂಡಿದ್ದೇವೆಯೆ..? ಊಟಕ್ಕೆ ಬೇಕು ಅಂತ. ಅವುಗಳ ಹೆಸರಿನಲ್ಲಿ ಹೊಲ ಇಲ್ಲ, ಹಣ ಇಲ್ಲ, ಏನೇನು ಇಲ್ಲ. ಆದರೆ ಮಜವಾಗಿರುತ್ತವೆ. ನಮಗೆ ಬ್ಯಾಂಕಿನಲ್ಲಿ ಹಣವಿದೆ. ಮನೆ ಇದೆ. ಹೊಲ ಇದೆ. ಆದರೂ ಬಡವರಾಗಿದ್ದೇವೆ. ಪ್ರಾಣಿ, ಡಾಕ್ಟರ್ ಹತ್ರ ಹೋಗಿ ನನಗೇನಾಗಿದೆ ಅಂತ ಕೇಳಿಲ್ಲ. ನಮಗೆ ಡಾಕ್ಟರ್ ಇದ್ದಾರೆ. ನಮಗೆ ದೇವಸ್ಥಾನ ಇದೆ. ಅಲ್ಲಿ ಹೋಗಿ ಬೇಡಿಕೆ ಸಲ್ಲಿಸುತ್ತೇವೆ. ಆದರೆ ಯಾವುದಾದರೂ ಪ್ರಾಣಿ ದೇವಸ್ಥಾನಕ್ಕೆ ಹೋಗಿ ಬೇಡಿಕೆ ಇಟ್ಟದೆಯೇನು?. ಅದೇ ದೇವಸ್ಥಾನದ ಮೇಲೆ ಕುಳಿತಿರುತ್ತದೆ. ಹಾಡಿಕೊಳ್ಳುತ್ತಾ ಇರುತ್ತವೆ. ಮನುಷ್ಯ ಬೇಡಿ ಕೊಳ್ಳುತ್ತಾ ಇರುತ್ತಾನೆ.

ಮನಸ್ಸು ಶ್ರೀಮಂತವಾಗದೆ, ಯಾವುದು ಸಂಪತ್ತು ಅಂತ ತಿಳಿಯಲಾರದೆ, ನಾವು ಶ್ರೀಮಂತರು ಆಗೋದಿಲ್ಲ. ಅದಕ್ಕೆ ಸಂಪತ್ತು ಯಾವುದು ಅಂದರೆ ಶರೀರ ಸಂಪತ್ತು. ಭಾವ ಸಂಪತ್ತು ಮತ್ತು ಜ್ಞಾನ ಸಂಪತ್ತು. ಈ ಮೂರು ನಿಜವಾದ ಸಂಪತ್ತುಗಳು. ಈ ಮೂರು ಚೆನ್ನಾಗಿತ್ತು ಅಂದರೆ ಗುಡಿಸಲಿನಲ್ಲಿಯೂ ನಾವು ಶ್ರೀಮಂತರೇ, ಅರಮನೆಯಲ್ಲಿಯೂ ನಾವು ಶ್ರೀಮಂತರೇ, ಅಲ್ಲವೇ?

**– ಎಂ.ಪಿ. ಜ್ಞಾನೇಶ್,** ಮಂಗಳೂರು



# ಕಣ್ಣಿನ ಬಣ್ಣದಿಂದ ವ್ಯಕ್ತಿತ್ವ ತಿಳಿಯಬಹುದೇ?



ದೇವರ ಸೃಷ್ಟಿಯೇ ಬಹು ವಿಚಿತ್ರ. ಒಬ್ಬರಂತೆ ಒಬ್ಬರಿಲ್ಲ. ಒಬ್ಬ ವ್ಯಕ್ತಿಯ ಕಿವಿ, ಇನ್ನೊಂದು ವ್ಯಕ್ತಿಯ ಹಾಗಿಲ್ಲ. ಒಬ್ಬರ ಕಣ್ಣು ಕಪ್ಪಾದರೆ ಮತ್ತೊಬ್ಬರದ್ದು ನೀಲಿ, ಇನ್ನೊಬ್ಬರದ್ದು ಬೆಕ್ಕಿನ ಕಣ್ಣು. ಖ್ಯಾತ ನಟಿ ಐಶ್ವರ್ಯ ರೈ ಕಣ್ಣು ಬೆಕ್ಕಿನ ಕಣ್ಣಾದರೆ, ಮೊನ್ನೆ ಮೊನ್ನೆ ಕುಂಭಮೇಳದಲ್ಲಿ ಮಣಿಸರ ಮಾರುತ್ತಿದ್ದ ಮೊನಾಲಿಸಾದ್ದು ಗಾಜಿನ ಕಣ್ಣು, ವಿದೇಶಿಗರ ಕಣ್ಣಿನ ಬಣ್ಣ ಬೂದು ಮಿಶ್ರಿತವಾಗಿದ್ದರೆ, ಭಾರತೀಯರದ್ದು ಬಹುತೇಕ ಕಪ್ಪು ವರ್ಣ. ಈ ಕಣ್ಣಿನ ವಿವಿಧ ಬಣ್ಣಗಳ ಮುಖಾಂತರ ಒಬ್ಬ ವ್ಯಕ್ತಿಯ ಗುಣಗಳನ್ನು ಅಳೆಯಲು ಸಾಧ್ಯವೇ? ಇಲ್ಲಿವೆ ಕೆಲವೊಂದು ಕುತೂಹಲಕಾರಿ ಸಂಗತಿಗಳು

ಸಾಮಾನ್ಯವಾಗಿ ನಾವೆಲ್ಲರೂ ನಮ್ಮ ಭವಿಷ್ಯದ ಬಗ್ಗೆ ತಿಳಿದುಕೊಳ್ಳಲು, ಗುಣಸ್ವಭಾವ ಹೇಗಿದೆ ಎಂಬುದನ್ನು ತಿಳಿಯಲು ಜ್ಯೋತಿಷ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಗಿಣಿಶಾಸ್ತ್ರ, ಹಸ್ತಶಾಸ್ತ್ರ, ಇತ್ಯಾದಿಗಳನ್ನು ಅವಲಂಬಿಸುತ್ತೇವೆ. ಇದು ಮಾತ್ರವಲ್ಲದೆ ಕಣ್ಣು, ಕಿವಿ, ಮೂಗು, ಹಣೆ, ಪಾದದ ಆಕಾರ, ಕೈಬೆರಳುಗಳ ಆಕಾರ ಮೂಲಕವೂ ಸ್ವತಃ ನಾವೇ ನಮ್ಮ ವ್ಯಕ್ತಿತ್ವ ಹೇಗಿದೆ ಎಂಬುದನ್ನು ಪರೀಕ್ಷಿಸಿಕೊಳ್ಳಬಹುದು. ಅದೇ ರೀತಿ ಕಣ್ಣಿನ ಬಣ್ಣದ ಮೂಲಕವೂ ವ್ಯಕ್ತಿಯ ಸ್ವಭಾವ, ನಡವಳಿಕೆ ಹೇಗಿದೆ ಎಂಬುದನ್ನು ಪರೀಕ್ಷಿಸಬಹುದು. ಬಹುತೇಕರ ಕಣ್ಣಿನ ಬಣ್ಣ ಕಪ್ಪಾಗಿದ್ದರೆ ಇನ್ನೂ ಕೆಲವರ ಕಣ್ಣು ಕಂದು, ನೀಲಿ, ಹಸಿರು ಬಣ್ಣದ್ದಾಗಿರುತ್ತದೆ. ಇಂದಿನ ಈ ವ್ಯಕ್ತಿತ್ವ ಪರೀಕ್ಷೆಯಲ್ಲಿ ಕಣ್ಣಿನ ಬಣ್ಣದ ಆಧಾರದ ಮೇಲೆ ನಿಮ್ಮ ವ್ಯಕ್ತಿತ್ವ ಹೇಗಿದೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವ

**ಕಪ್ಪು ಬಣ್ಣ:** ಹೆಚ್ಚಿನ ಜನರು ಕಪ್ಪು ಬಣ್ಣದ ಕಣ್ಣುಗಳನ್ನು ಹೊಂದಿರುತ್ತಾರೆ. ಕಪ್ಪು ಕಣ್ಣುಗಳನ್ನು ಹೊಂದಿರುವ ತುಂಬಾನೇ ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ಅವರು ತಮ್ಮ ಕೆಲಸದಲ್ಲಿ ಬಹಳ ನುರಿತರು. ಇವರು ಏನೇ ಮಾಡಿದರೂ, ಅದನ್ನು ಪೂರ್ಣ ಹೃದಯದಿಂದ ಮಾಡುತ್ತಾರೆ ಮತ್ತು ತಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ಪೂರ್ಣಗೊಳಿಸಲು ಮುಂಚಿತವಾಗಿಯೇ ಯೋಜಿಸುತ್ತಾರೆ. ಇವರು ತಮ್ಮ ಕಠಿಣ ಪರಿಶ್ರಮದ ಮೂಲಕವೇ ಉನ್ನತ ಸ್ಥಾನಕ್ಕೆ ಏರುತ್ತಾರೆ. ಇಷ್ಟು ಮಾತ್ರವಲ್ಲದೆ ಇವರು ತಮ್ಮ ಸಂಗಾತಿಯ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಿರುತ್ತಾರೆ. ಮತ್ತು ಇವರು ನಂಬಿಕೆಗೆ ಅರ್ಹರು.

**ಕಂದು ಕಣ್ಣುಗಳು:** ಕಂದು ಬಣ್ಣದ ಕಣ್ಣುಗಳನ್ನು ಹೊಂದಿರುವ ಜನರು ಸ್ವಾಭಾವಿಕವಾಗಿ ತುಂಬಾ ಒಳ್ಳೆಯವರು. ಅವರಿಗೆ ಜನರನ್ನು ಹೇಗೆ ಆಕರ್ಷಿಸಬೇಕೆಂದು ಬಹಳ ಚೆನ್ನಾಗಿ ತಿಳಿದಿದೆ. ಅಲ್ಲದೆ ಇತರರು ಇವರತ್ತ ಬಲು ಸುಲಭವಾಗಿ ಆಕರ್ಷಿತರಾಗುತ್ತಾರೆ. ಇವರು ಎಲ್ಲಾ ಕಷ್ಟಗಳನ್ನು ಬಹಳ ಬುದ್ಧಿವಂತಿಕೆಯಿಂದ ಎದುರಿಸುತ್ತಾರೆ. ತುಂಬಾ ಸೃಜನಶೀಲರಾದ ಇವರು ಯಾವಾಗಲೂ ಹೊಸ ವಿಷಯಗಳನ್ನು ಕಲಿಯುವಲ್ಲಿ ತುಂಬಾನೇ ಆಸಕ್ತಿಯನ್ನು ಹೊಂದಿರುತ್ತಾರೆ. ಅಲ್ಲದೆ ಇವರು ಜೀವನದಲ್ಲಿ ಪ್ರೀತಿಗೆ ಹೆಚ್ಚಿನ ಮಹತ್ವವನ್ನು ನೀಡುವ ವ್ಯಕ್ತಿಗಳಾಗಿದ್ದಾರೆ.

**ಬೂದು ಬಣ್ಣದ ಕಣ್ಣುಗಳು:** ಬೂದು ಬಣ್ಣದ ಕಣ್ಣುಗಳನ್ನು ಹೊಂದಿರುವವರು ತುಂಬಾ ಮುಕ್ತ ಮನಸ್ಸಿನವರು. ಅವರು ತಮ್ಮ ಜೀವನದಲ್ಲಿ ಸ್ವಾತಂತ್ರ್ಯವನ್ನು ಆನಂದಿಸುತ್ತಾರೆ. ಅವರು ತಮ್ಮ ಕುಟುಂಬ ಸದಸ್ಯರೊಂದಿಗೆಯೂ ಇದೇ ರೀತಿಯ ವಾತಾವರಣವನ್ನು ಕಾಯ್ದುಕೊಳ್ಳುತ್ತಾರೆ. ನೇರ ಸ್ವಭಾವದ ವ್ಯಕ್ತಿಗಳಾದ ಇವರು ಯಾರ ಬಗ್ಗೆಯೂ ಬೆನ್ನ ಹಿಂದೆ ಮಾತನಾಡುವುದಿಲ್ಲ.

**ನೀಲಿ ಕಣ್ಣುಗಳು:** ನೀಲಿ ಬಣ್ಣದ ಕಣ್ಣುಗಳನ್ನು ಹೊಂದಿರುವ ಜನರು ತಮ್ಮ ಜೀವನದಲ್ಲಿ ಸ್ಥಿರತೆಯನ್ನು ಬಯಸುತ್ತಾರೆ ಮತ್ತು ಇತರರಿಗೆ ಸಹಾಯ ಮಾಡಲು ಇಷ್ಟಪಡುವವರಾಗಿರುತ್ತಾರೆ. ಆದರೆ ಕೆಲವೊಮ್ಮೆ. ಇತರರಿಗೆ ಸಹಾಯ ಮಾಡುವ ಪ್ರಯತ್ನದಲ್ಲಿ, ಅವರು ತಮ್ಮನ್ನು ತಾವು ಹಾನಿ ಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ಸ್ವಲ್ಪ ಜಾಗರೂಕರಾಗಿರಬೇಕು.

**ಹಸಿರು ಕಣ್ಣುಗಳು:** ಹಸಿರು ಕಣ್ಣುಗಳನ್ನು ಹೊಂದಿರುವ ಜನರು ತುಂಬಾ ಕುತೂಹಲ ಸ್ವಭಾವದ ವ್ಯಕ್ತಿಗಳು ಮತ್ತು ಬುದ್ಧಿವಂತರು. ಅವರು ಯಾವಾಗಲೂ ಏನನ್ನಾದರೂ ತಿಳಿದುಕೊಳ್ಳಲು. ರಹಸ್ಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ ಮತ್ತು ತಮ್ಮ ಬುದ್ಧಿವಂತಿಕೆಯಿಂದ ಅದರಲ್ಲಿ ಯಶಸ್ಸನ್ನೂ ಸಹ ಸಾಧಿಸುತ್ತಾರೆ. ಅಲ್ಲದೆ – ಇವರು ತಮ್ಮ ಕೆಲಸದ ಬಗ್ಗೆ ಹೆಚ್ಚಿನ ಉತ್ಸಾಹವನ್ನು ಹೊಂದಿರುತ್ತಾರೆ. ಇವರು ಜೀವನವನ್ನು ಚೆನ್ನಾಗಿ ಆನಂದಿಸಲು ಬಯಸುವ ವ್ಯಕ್ತಿಗಳು.

ಇವೆಲ್ಲಾ ಎಷ್ಟು ಸತ್ಯ ಆ ಭಗವಂತನಿಗೇ ಗೊತ್ತು. ನಂಬುವವರು ನಂಬಲಿ, ಬಿಡುವವರು ಬಿಡಲಿ. ಅಲ್ಲವೇ?

## ಅಧಿಕಾರ

ಊರಿನ ಪರಿಸ್ಥಿತಿಯ ಕಂಡು ಆಗಾಗ ಬೇಸರಗೊಳ್ಳುತ್ತಾನೆ. ಇದನ್ನು ಬದಲಾಯಿಸಬೇಕು ಅಂತ ತುಂಬಾ ಸಲ ಯೋಚಿಸಿದ್ದಿದೆ. ಆದರೆ ರಾಜೇಶನಿಗೆ ಯಾವ ಅವಕಾಶವೂ ಸಿಕ್ಕಿರಲಿಲ್ಲ. ತನ್ನಿಂದಾಗಿ ತನ್ನ ಊರು ಬದಲಾಗಬೇಕು ಅಂತ ಹಠ ಕಟ್ಟಿ ಒಂದು ಪಕ್ಷದೊಳಗೆ ದುಡಿಯೋದಕ್ಕೆ ಆರಂಭಿಸಿದ. ದುಡಿಯುತ್ತ ಎಲ್ಲರ ಮೆಚ್ಚುಗೆಗೆ ಪಾತ್ರನಾದ. ಇಡೀ ಊರು ಆತನನ್ನ ನಾಯಕ ಅಂತ ಗುರುತಿಸುವುದಕ್ಕೆ ಆರಂಭವಾಯಿತು. ಆತನಿಗೆ ಜವಾಬ್ದಾರಿ ಕೊಟ್ಟರೆ ನಮ್ಮೂರು ಅಭಿವೃದ್ಧಿ ಹೊಂದಿದ ಪ್ರದೇಶವಾಗುವುದರಲ್ಲಿ ಅನುಮಾನ ಇಲ್ಲ ಅನ್ನೋದು ಪ್ರತಿಯೊಬ್ಬರಿಗೂ ಅರ್ಥವಾಯಿತು. ಈ ಸಲದ ಚುನಾವಣೆಯಲ್ಲಿ ತಾನು ವಿಜಯಿಯಾದರೆ ಏನೆಲ್ಲ ಕೆಲಸಗಳನ್ನ ಮಾಡಬೇಕು ಅಂತ ಪಟ್ಟಿ ತಯಾರಿ ಮಾಡಿಕೊಂಡ. ಆದರೆ ಚುನಾವಣೆಯ ಹೆಸರು ಘೋಷಣೆಯಾದಾಗ ಆತ



ಅವರ ಆಯ್ಕೆಯ ಪಟ್ಟಿಯಲ್ಲಿ ಇರಲಿಲ್ಲ ರಾಜಕಾರಣವನ್ನ ವಂಶಪಾರಂಪರ್ಯವಾಗಿ ತಮ್ಮ ಕುತ್ತಿಗೆಗೆ ಬಳಿದುಕೊಂಡು ಓಡಾಡುವ ರಾಜಕಾರಣಿಗಳ ಮೊಮ್ಮಗ ಈ ಸಲದ ಅಭ್ಯರ್ಥಿಯಾಗಿದ್ದ. ದುಡಿಯದೆ ದುಡ್ಡು ಮಾಡುವುದಕ್ಕೆ ಅವರು ಹೆಜ್ಜೆ ಇಟ್ಟಿದ್ದರು. ಆ ಊರಿನ ಇಂದಿನ ರಾಜಕೀಯ ಮುಖಂಡ ಊರ ಮಧ್ಯದಲ್ಲಿ ಭಾಷಣ ಮಾಡುತ್ತಿದ್ದ ಯುವಕರಿಗೆ ರಾಜಕೀಯ ಅಧಿಕಾರ ಸಿಗಬೇಕು ಅಂತ ಆದರೆ ಅದು ಅವರ ಮೊಮ್ಮಕ್ಕಳಿಗೆ ಅನ್ನೋದು ನಿಧಾನವಾಗಿ ಅರ್ಥವಾಯಿತು.

**– ಧೀರಜ್** ಬೆಳ್ಳಾರೆ

# ಕ್ಷಯ ರೋಗದ ಬಗ್ಗೆ ಎಚ್ಚರ ವಹಿಸಿ

## ರೋಗ ನಿರ್ಮೂಲನೆಗೆ ಎಲ್ಲರ ಸಹಕಾರ ಅಗತ್ಯ: ಡಾ.ಅನಿಲ್

• ಪ್ರಜೋದಯ ವರದಿ

**ಹಾಸನ:** ಕ್ಷಯ ರೋಗ ಜನರ ಆರೋಗ್ಯಕ್ಕೂ, ಸಮಾಜಕ್ಕೂ ಹಾನಿ ಮಾಡುತ್ತದೆ. ಆದ್ದರಿಂದ ಎಚ್ಚರ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಅನಿಲ್ ತಿಳಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ವಿಶ್ವ ಕ್ಷಯರೋಗ ದಿನವನ್ನು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನರು ಕ್ಷಯ ರೋಗಕ್ಕೆ ಸರಿಯಾಗಿ ಚಿಕಿತ್ಸೆ ತೆಗೆದುಕೊಳ್ಳುತ್ತಿರಲಿಲ್ಲ, ಚಿಕಿತ್ಸೆ ತೆಗೆದುಕೊಳ್ಳುವವರು ಕೂಡ ಅರ್ಧದಲ್ಲಿ ಚಿಕಿತ್ಸೆ ನಿಲ್ಲಿಸುತ್ತಿದ್ದರು, ಆದ್ದರಿಂದ ಕ್ಷಯ ರೋಗ ನಿಯಂತ್ರಣ ಮಾಡಲು ತುಂಬಾ ಕಷ್ಟಕರವಾಗಿತ್ತು ಎಂದು ಹೇಳಿದರು.



ಕ್ಷಯ ರೋಗ ನಿಯಂತ್ರಣಕ್ಕೆ ಮುಖ್ಯವಾಗಿ ಕಾರಣವಾದವರು ಆಶಾ ಕಾರ್ಯಕರ್ತರು ಮತ್ತು ಆರೋಗ್ಯ ಕಾರ್ಯಕರ್ತರ ಪಾತ್ರ ತುಂಬಾ ಪ್ರಮುಖವಾಗಿದೆ. ಹೆಚ್ಚಾಗಿ ಎಲ್ಲರೂ ಕೂಡ ಹಳ್ಳಿಗಳಲ್ಲಿ ಕ್ಷಯ ರೋಗ ನಿಯಂತ್ರಣ ಪ್ರಚಾರ ಮಾಡಬೇಕು ಮತ್ತು ಕ್ಷಯ ರೋಗ ಮುಕ್ತ ಗ್ರಾಮ ಪಂಚಾಯಿತಿ ಮಾಡುವುದರ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದು ಕಿವಿಮಾತು ಹೇಳಿದರು.

ಕ್ಷಯ ರೋಗಿ ಇರುವ ಮನೆಯಲ್ಲಿ ತುಂಬ ಎಚ್ಚರಿಕೆಯಿಂದ ಇರಬೇಕು ಮತ್ತು ಮಕ್ಕಳ ಆರೋಗ್ಯದ ಕಡೆ ಜಾಗೃತಿ ವಹಿಸಬೇಕು, ಕ್ಷಯ ರೋಗಿಗಳು ಪ್ರಾಥಮಿಕ ಚಿಕಿತ್ಸೆ ಪಡೆಯುವುದು ಉತ್ತಮವಾದ ಮಾರ್ಗ ಎಂದು ಅವರು ತಿಳಿಸಿದರು.

ಐ.ಇ.ಸಿ ವಿಭಾಗದ ಮಂಜುಳ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



**ಜಾಥಾಕ್ಕೆ ಚಾಲನೆ: ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಾಬು ಜಾಥಕ್ಕೆ ಚಾಲನೆ ನೀಡಿ ಕ್ಷಯ ರೋಗ ಹೆಚ್ಚಿನದಾಗಿ ಸೆಕ್ಕರೆ ಕಾಯಿಲೆ ರೋಗಿಗಳ ಮೇಲೆ ಪರಿಣಾಮಗಳ ಬಗ್ಗೆ ವಿವರಿಸಿದರು.**

## ಮಾ.26 ರಂದು ವಿದ್ಯುತ್ ವ್ಯತ್ಯಯ



**ಹಾಸನ:** ಕನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, 66/11ಕೆ.ವಿ ಬಸವಾಪಟ್ಟ, ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮಾ 26 ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಬಸವಾಪಟ್ಟ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಜಾಡಘಟ್ಟ, ಆದಿಹಳ್ಳಿ, ರಂಗಾಪುರ ಬೆಲವತ್ತಳ್ಳಿ, ಬೈರಾಪುರ, ವೇದಾವತಿ, ಹೊನ್ನಾವರ, ಸಿದ್ದಾಪುರ, ಪೂಮಗಾಮೆ, ಬಸವಾಘಟ್ಟ, ಬಾಗೇಶಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಿ

## ಮಾಜಿ ಪ್ರಧಾನಿ ಹೆಚ್.ಡಿ.ಡಿ., ಕೇಂದ್ರ ಸಚಿವ ಹೆಚ್.ಡಿ.ಕೆ.ಗೆ ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ಜಿಲ್ಲೆಯ ಜ್ವಲಂತ ಸಮಸ್ಯೆಯಾಗಿರುವ ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಒದಗಿಸಬೇಕೆಂದು ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಮಂಗಳವಾರ ನವದೆಹಲಿಯಲ್ಲಿ ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದರು.

ಸಕಲೇಶಪುರ, ಆಲೂರು ಮತ್ತು ಬೇಲೂರು ತಾಲೂಕುಗಳಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ರೈತರು ಮತ್ತು ಕಾರ್ಮಿಕರು ನಿತ್ಯ ಭಯದ ನೆರಳಿನಲ್ಲಿ ಬದುಕುವಂತಾಗಿದೆ. ಈ ಭಾಗದಲ್ಲಿ ಆನೆಗಳ ದಾಳಿಯಿಂದ ಸತತವಾಗಿ ನಡೆಯುತ್ತಿರುವ ಜೀವ ಹಾನಿ ಮತ್ತು ಕೋಟ್ಯಂತರ ರೂ. ಮೌಲ್ಯದ ಬೆಳೆಹಾನಿಯನ್ನು ತಡೆಗಟ್ಟಲು ಶ್ರೀಲಂಕಾ ಮಾದರಿಯಲ್ಲಿ ವೈಜ್ಞಾನಿಕ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಈ ಸಂದರ್ಭದಲ್ಲಿ ಒತ್ತಾಯಿಸಿದರು.



ವಿಶ್ವನಾಥ್ ಅವರ ಮನವಿಗೆ ಪೂರಕವಾಗಿ ಸ್ಪಂದಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಶೀಘ್ರದಲ್ಲೇ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವರನ್ನು ಕಾಡಾನೆ ಪೀಡಿತ ಪ್ರದೇಶಗಳಿಗೆ ಖುದ್ದಾಗಿ ಕರೆತಂದು ಸ್ಥಳ ಪರಿಶೀಲನೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೆ, ಕೇಂದ್ರ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಈ ದೀರ್ಘಕಾಲದ ಸಮಸ್ಯೆಗೆ ಅಗತ್ಯವಿರುವ ಕಾಯಂ ಕ್ರಮಗಳನ್ನು ಕೈಗೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.



ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಸಕಲೇಶಪುರ, ಆಲೂರು ಹಾಗೂ ಬೇಲೂರು ತಾಲ್ಲೂಕುಗಳಲ್ಲಿ ತೀವ್ರವಾಗಿರುವ ಆನೆ ಹಾವಳಿಯ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದ್ದೇನೆ ಸತತವಾಗಿ ಜೀವಹಾನಿ ಮತ್ತು ಬೆಳೆ ಹಾನಿ ಉಂಟುಮಾಡುತ್ತಿರುವ ಆನೆಗಳನ್ನು ನಿಯಂತ್ರಿಸಲು ಶ್ರೀಲಂಕಾದಲ್ಲಿ ಯಶಸ್ವಿಯಾಗಿರುವ ಬಲಿಷ್ಠ ವಿದ್ಯುತ್ ಬೇಲಿ ಮತ್ತು ಸಮುದಾಯ ಆಧಾರಿತ ನಿರ್ವಹಣಾ ಪದ್ಧತಿಯನ್ನು ನಮ್ಮಲ್ಲೂ ಅಳವಡಿಸಿದರೆ ಸಮಸ್ಯೆ ಬಗೆಹರಿಯುವ ನಿರೀಕ್ಷೆ ಇದೆ ಎಂದು ಹೇಳಿದರು.

# ಪಿಡಿಒ ಅಮಾನತ್ತುಗೊಳಿಸದಿದ್ದರೆ ಪ್ರತಿಭಟನೆ ಎಚ್ಚರಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಭಾಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಚಿನ್ನಸ್ವಾಮಿ ಅವರ ಭ್ರಷ್ಟಾಚಾರದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅವರನ್ನು ಸೇವೆಯಿಂದ ಅಮಾನತುಗೊಳಿಸದಿದ್ದರೆ ಮಾ.26 ರಂದು ತಾಲ್ಲೂಕು ಪಂಚಾಯಿತಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಗಗನ್ ಹಾಡ್ಲಳ್ಳಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಡಿಒ ಚಿನ್ನಸ್ವಾಮಿ ಅವರ ವಿರುದ್ಧದ ಭ್ರಷ್ಟಾಚಾರದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿದ್ದರೂ, ಅವರ ವಿರುದ್ಧ ಕ್ರಮ ಕೈಗೊಳ್ಳಲು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳ ರಕ್ಷಣೆಗೆ ಮುಂದಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಆರೋಪಿಸಿದರು.



ದಾಖಲೆ ಸಮೇತ ಭ್ರಷ್ಟಾಚಾರವನ್ನು ಪ್ರಸ್ತುತಪಡಿಸಿದರೂ, ಅಮಾನತು ಮಾಡಲು ಸಾಧ್ಯವಿಲ್ಲ ಎನ್ನುತ್ತಿರುವ ಇಒ ಅವರ ಧೋರಣೆ ಖಂಡನೀಯ. ತಕ್ಷಣವೇ ಪಿಡಿಒ ಅವರನ್ನು ಅಮಾನತುಗೊಳಿಸಿ ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು. ಇಲ್ಲದಿದ್ದರೆ ಕರವೇ ತಾಲೂಕು ಘಟಕದ ವತಿಯಿಂದ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಸ್ತುವಾರಿ ರಘು ಪಾಳ್ಯ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಜಯಕುಮಾರ್, ರೈತ ಘಟಕದ ವಸಂತ ಬೊಮ್ಮನಕೆರೆ, ಕಾರ್ಮಿಕ ಘಟಕದ ಸಂಗ್ರಾಮ್, ಸುನಿಲ್, ಮಂಜುನಾಥ್ ಉಪಸ್ಥಿತರಿದ್ದರು.

# ಚೆನ್ನಕೇಶವ ಜಾತ್ರೆಗೆ ಭರ್ಜರಿ ಸಿದ್ಧತೆ: ಪುರಸಭಾ ಅಧ್ಯಕ್ಷರಿಂದ ಪರಿಶೀಲನೆ

• ಪ್ರಜೋದಯ ವರದಿ

**ಬೇಲೂರು:** ವಿಶ್ವ ವಿಖ್ಯಾತ ಚೆನ್ನಕೇಶವ ದೇವಸ್ಥಾನದಲ್ಲಿ ನಡೆಯಲಿರುವ ಚೆನ್ನಕೇಶವ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ಮಾ.31 ಹಾಗೂ ಏಪ್ರಿಲ್ 1ರಂದು ದಿವ್ಯ ಹಾಗೂ ನಾಡ ರಥೋತ್ಸವ ನಡೆಯಲಿದ್ದು, ಲಕ್ಷಾಂತರ ಭಕ್ತರು ವಿವಿಧ ಭಾಗಗಳಿಂದ ಆಗಮಿಸುವ ನಿರೀಕ್ಷೆಯಿದೆ.

ಜಾತ್ರಾ ಹಿನ್ನೆಲೆ ಪುರಸಭೆಯಿಂದ ಭಕ್ತರ ಅನುಕೂಲಕ್ಕಾಗಿ ವಿವಿಧ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ದೇವಸ್ಥಾನದ ಸಮೀಪದ ಕಲ್ಯಾಣಿಯಲ್ಲಿ ಸ್ನಾನದ ವ್ಯವಸ್ಥೆಗೆ ಅನುಕೂಲ ಮಾಡಲಾಗಿದ್ದು, ಭಕ್ತರಿಗೆ ಅಗತ್ಯವಿರುವ ಮಟ್ಟಿಗೆ ನೀರನ್ನು ಈಗಾಗಲೇ ತುಂಬಲಾಗುತ್ತಿದೆ. ತೆಪ್ಪೋತ್ಸವದ ದಿನ ಕಲ್ಯಾಣಿಯನ್ನು ಸಂಪೂರ್ಣವಾಗಿ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗಿದೆ. ಭದ್ರತಾ ದೃಷ್ಟಿಯಿಂದ ಸೆಕ್ಯೂರಿಟಿಗಳನ್ನು ನಿಯೋಜಿಸಲಾಗಿದೆ.

ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು 25 ಕಡೆಗಳಲ್ಲಿ ಮಾಡಲಾಗುತ್ತಿದ್ದು, ನಲ್ಲಿ ವ್ಯವಸ್ಥೆಗಳನ್ನು ಸ್ಥಾಪಿಸಲಾಗುತ್ತಿದೆ. ಜೊತೆಗೆ, ಜಾತ್ರಾ ದಿನಗಳಲ್ಲಿ ಯಾವುದೇ ತೊಂದರೆ ಉಂಟಾಗದಂತೆ ಮೊಬೈಲ್ ಟಾಯ್ಲೆಟ್‌ಗಳನ್ನು ಅಳವಡಿಸಲಾಗುತ್ತಿದೆ. ತುರ್ತು ಆರೋಗ್ಯ ಸಮಸ್ಯೆಗಳಿಗಾಗಿ ವೈದ್ಯರ ಸೇವೆಯನ್ನೂ ಸಿದ್ಧವಾಗಿಡಲಾಗಿದೆ.

ಜಾತ್ರಾ ದಿನದಂದು ನಡೆಯುವ ಸಂತೆಯನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗುತ್ತಿದ್ದು, ಭಕ್ತರ ಸಂಚಾರಕ್ಕೆ ಅಡಚಣೆ ಆಗದಂತೆ ಕ್ರಮ ಕೈಗೊಳ್ಳಲಾಗಿದೆ. ಪುರಸಭೆ ವತಿಯಿಂದ ಪೂರ್ವಭಾವಿ ಸಭೆ ನಡೆಸಿ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.



ಈ ನಡುವೆ ಜಾತ್ರಾ ಸಿದ್ಧತೆಗಳನ್ನು ಪುರಸಭೆ ಪ್ರಭಾರ ಅಧ್ಯಕ್ಷೆ ಉಷಾ ಸತೀಶ್ ವೀಕ್ಷಿಸಿ ಬಳಿಕ ಮಾತನಾಡಿ, ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲಾಗಿದೆ. ಕಲ್ಯಾಣಿಯಲ್ಲಿ ಸ್ನಾನದ ವ್ಯವಸ್ಥೆ, ಕುಡಿಯುವ ನೀರಿಗಾಗಿ 25 ಕಡೆಗಳಲ್ಲಿ ನಳ ವ್ಯವಸ್ಥೆ, ಮೊಬೈಲ್ ಟಾಯ್ಲೆಟ್‌ಗಳು ಹಾಗೂ ತುರ್ತು ಆರೋಗ್ಯ ಸೇವೆಗಾಗಿ ವೈದ್ಯರ ನಿಯೋಜನೆ ಮಾಡಲಾಗಿದೆ. ತೆಪ್ಪೋತ್ಸವದ ದಿನ ಪೂರ್ಣ ಕಲ್ಯಾಣಿಯನ್ನು ನೀರಿನಿಂದ ತುಂಬಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಭಕ್ತರ ಸಂಚಾರಕ್ಕೆ ಅಡಚಣೆ ಆಗದಂತೆ ಸಂತೆ ವ್ಯವಸ್ಥೆಯನ್ನು ಬೇರೆಡೆಗೆ ಸ್ಥಳಾಂತರಿಸಲಾಗುತ್ತಿದೆ. ಯಾವುದೇ ಅಸೌಕರ್ಯ ಉಂಟಾಗದಂತೆ ಪೂರ್ವಭಾವಿ ಸಭೆ ನಡೆಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ. ಈ ಜಾತ್ರೆ ನಮ್ಮ ಎಲ್ಲರ ಮನೆ ಹಬ್ಬವಾಗಿದ್ದು, ಪಟ್ಟಣದ ನಾಗರಿಕರು ಸಹಕಾರ ನೀಡಬೇಕು. ಸ್ವಚ್ಛತೆ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಆರೋಗ್ಯಾಧಿಕಾರಿ ಲೋಹಿತ್ ಇತರರು ಉಪಸ್ಥಿತರಿದ್ದರು.

## ಸುಪ್ರಿಂಕೋರ್ಟ್ ಐತಿಹಾಸಿಕ ತೀರ್ಪು

• ಪ್ರಜೋದಯ ವರದಿ

**ನವದೆಹಲಿ:** ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳಿಗೆ ಸೇರಿದ ವ್ಯಕ್ತಿಗಳು ಮಾತ್ರ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಪಡೆಯಬಹುದು. ಕ್ರಿಶ್ಚಿಯನ್ ಧರ್ಮದಂತಹ ಯಾವುದೇ ಇತರ ಧರ್ಮಕ್ಕೆ ಮತಾಂತರಗೊಂಡರೆ ಮತಾಂತರಗೊಂಡ ವ್ಯಕ್ತಿಯು ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಕಳೆದುಕೊಳ್ಳುತ್ತಾನೆ ಎಂದು ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ.

ಹೀಗಾಗಿ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ದಲಿತ ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ (ಎಸ್‌ಸಿ, ಎಸ್‌ಟಿ ಕಾಯ್ದೆ)ಯಡಿ ರಕ್ಷಣೆ ಕೇಳುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಪಿ.ಕೆ.ಮಿಶ್ರಾ ಮತ್ತು ಮನಮೋಹನ್ ಪೀಠವು ತೀರ್ಪು ನೀಡಿದೆ.


# ಮನಸೂರೆಗೊಂಡ ಎತ್ತಿನಗಾಡಿ ಓಟದ ಸ್ಪರ್ಧೆ

## ಹೆಚ್ಚು ರಾಸುಗಳನ್ನು ಸಾಕುತ್ತಿರುವುದು ತುಂಬಾ ಖುಷಿಯ ವಿಚಾರ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ಚಿಕ್ಕಬೆಮ್ಮತ್ತಿ ಗ್ರಾಮದ ನಂದ ಜನನಿ ಜನ್ಮಭೂಮಿಯಲ್ಲಿ ಹಮ್ಮಿಕೊಂಡಿದ್ದ 6ನೇ ವರ್ಷದ ರಾಜ್ಯಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆ ಕಾರ್ಯಕ್ರಮವು ಎಲ್ಲರ ಮನಸೂರೆಗೊಂಡಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಎ.ಮಂಜು ಅವರು, ಎತ್ತಿನಗಾಡಿ ಓಟದ ಸ್ಪರ್ಧೆಯು ರೈತರ ಪಾರಂಪರಿಕ ಆಟವಾಗಿದ್ದು ಎಲ್ಲಾ ರೈತರು ಭಾಗವಹಿಸುವಂತೆ ಮನವಿ ಮಾಡಿದರಲ್ಲದೆ, ರೈತರು ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚಾಗಿ ರಾಸುಗಳನ್ನು ಸಾಕುತ್ತಿರುವುದು ತುಂಬಾ ಖುಷಿಯ ವಿಚಾರವಾಗಿರುವುದಾಗಿ ತಿಳಿಸುತ್ತಾ, ಶಿಕ್ಷಣದೊಂದಿಗೆ ಮಾನಸಿಕ ಹಾಗೂ ದೈಹಿಕ ಸದೃಢ ಆರೋಗ್ಯವಂತ ಸಮಾಜದ ನಿರ್ಮಾಣ ಕ್ರೀಡೆಯಿಂದ ಮಾತ್ರ ಸಾಧ್ಯ ಎಂದರು.





ಕ್ರಷರ್ ಮಾಲೀಕರಾದ ಸುರೇಶ್ ಅವರು ಮಾತನಾಡಿ, ಜೋಡಿ ಎತ್ತಿನ ಗಾಡಿ ಓಟದ ಸ್ಪರ್ಧೆಯನ್ನು ನಮ್ಮ ಚಿಕ್ಕಬೆಮ್ಮತ್ತಿ ಗ್ರಾಮದಲ್ಲಿ ಶ್ರದ್ಧೆ ಮತ್ತು ಒಗ್ಗಟ್ಟಿನಿಂದ ಏರ್ಪಡಿಸಿರುವುದು ಹೆಮ್ಮೆಯ ವಿಷಯ. ಇದು ಕೇವಲ ಸ್ಪರ್ಧೆಯಲ್ಲ, ನಮ್ಮ ಹಳ್ಳಿ ಸಂಸ್ಕೃತಿ, ಪಾರಂಪರ್ಯ ಮತ್ತು ಕ್ರೀಡಾ ಮನೋಭಾವವನ್ನು ಜೀವಂತವಾಗಿಟ್ಟಿರುವ ಹಳ್ಳಿ ಹಬ್ಬವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ವಕ್ತಾರ ಮೋಹನ್‌ಮಲ್ಲಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಕೆ.ಸಣ್ಣಸ್ವಾಮಿ, ಸಮಾಜ ಸೇವಕ ಸಿಂಗನಕುಪ್ಪೆ ಸುರೇಶ್, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಪ್ರಭಾಕರ್, ಮುಖಂಡರುಗಳಾದ ನಾರಾಯಣಗೌಡ, ಸ್ವಾಮಿಗೌಡ, ಎಲ್‌ಐಸಿ ಶ್ರೀನಿವಾಸ್ ಗೌಡ, ಶೇಖರ್, ಅನಿಲ್ ಇದ್ದರು.

## ಮಾ.27, 31 ರಂದು ಮಾಂಸ ಮಾರಾಟ ನಿಷೇಧ




• ಪ್ರಜೋದಯ ವರದಿ

**ಹಾಸನ:** ಮಾರ್ಚ್ 27 ರಂದು ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಹಾಗೂ ಮ.31 ರಂದು ಮಹಾವೀರ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲಾ ಖಸಾಯಿ ಖಾನೆಗಳಲ್ಲಿ ಎಲ್ಲಾ ರೀತಿಯ ಪ್ರಾಣಿವಧೆ ಮತ್ತು ಮಾಂಸ ಮಾರಾಟ ನಿಷೇಧಿಸಲಾಗಿದೆ.

ಪ್ರಕಟಣೆಯನ್ನು ಮೀರಿ ಪ್ರಾಣಿವಧೆ ಹಾಗೂ ಮಾಂಸ ಮಾರಾಟ ಮಾಡಿದಲ್ಲಿ ನಿಮ್ಮ ವಿರುದ್ಧ ಪಾಲಿಕೆಗಳ ಕಾಯ್ದೆಯಂತೆ ಸೂಕ್ತ ಕಾನೂನುಕ್ರಮ ಜರುಗಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ಶ್ರೀ ಕೋಡಮ್ಮದೇವಿ ಉತ್ಸವ

• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಗ್ರಾಮ ದೇವತೆ ಶ್ರೀ ಕೋಡಮ್ಮದೇವಿ ಜಾತ್ರ ಮಹೋತ್ಸವದ ಅಂಗವಾಗಿ ಹಾರನಹಳ್ಳಿ ಶ್ರೀ ದೇವಿಯವರ ದೇವಾಲಯದಿಂದ ರಾಜಮಾರ್ಗ ಮಾಗಿ ಶ್ರೀ ಕೋಡಮ್ಮ ದೇವಿ ಧೂತರಾಯಸ್ವಾಮಿ ಶ್ರೀ ಸಿದ್ದರಾಮೇಶ್ವರಸ್ವಾಮಿ ಶ್ರೀ ವೀರಭದ್ರಸ್ವಾಮಿ ಕೆಂಚರಾಯಸ್ವಾಮಿ ದೇವರುಗಳಿಗೆ ವಿಶೇಷ ಹೂವಿನ ಅಲಂಕಾರ ಮಾಡಿ ಹೋಂಭಾಳೆ ಕಲಶ ಹೊತ್ತು ಕರ್ಪೂರ ಸೇವೆಯಲ್ಲಿ ಕೋಡಮ್ಮ ದೇವಿ ಮೂಲಸನ್ನಿಧಾನಕ್ಕೆ ಉತ್ಸವದಲ್ಲಿ ಕರೆತರಲಾಯಿತು.

ಪಲ್ಲಕಿಯಲ್ಲಿ ವೀರಾಜಮಾನರಾಗಿ ಶ್ರೀ ಸಿದ್ದರಾಮೇಶ್ವರ ಸ್ವಾಮಿಯನ್ನು ಕೋಡಮ್ಮದೇವಿಗೆ ಸನ್ನಿಧಿಗೆ ತಂದ ನಂತರ ಶ್ರೀ ಕೋಡಮ್ಮದೇವಿ ಮೂಲ ಸನ್ನಿಧಾನದಲ್ಲಿ ಕೋಡಮ್ಮದೇವಿ ಅಮ್ಮನವರಿಗೆ ಪಂಚಾಮೃತ ಅಭಿಷೇಕ ಕುಂಕುಮಾರ್ಚನೆ ನಡೆಯಿತು.



ಕಲಶ ಪೂಜೆ ನೆಡೆದ ನಂತರ ರಥಕ್ಕೆ ಗಣಪತಿ ಪೂಜೆ ಪುಣ್ಯಾಹಃ ನಡೆದ ನಂತರ ಅರೆವಾದ್ಯ ದೋಣ್ಣು ಕರಡೆ ವಾದ್ಯ ಸಮೇತ ಉತ್ಸವ ಮಾಡಿ ರಥಕ್ಕೆ ಕಳಶಾರೋಹಣ ಮಾಡಿದ್ದರು ನಂತರ ವಿವಿಧ ಧಾರ್ಮಿಕ ಪೂಜೆ ನಡೆಯಿತು.

ಹೆಬ್ಬಾರನಹಳ್ಳಿ ಜಗದೀಶ್ ರಥ ಪೂಜೆ ಸೇವೆಮಾಡಿದ್ದರು ತಿಮ್ಮಪ್ಪ ಮತ್ತು ಮಕ್ಕಳು ದಾಸಪ್ಪನವರ ವಂಶಸ್ಥರಿಂದ ದೇವಾಲಯ ಹತ್ತಿರ ಧ್ವಜಾರೋಹಣ ನಡೆಯಿತು.

# ಶ್ರೀ ಚೌಡೇಶ್ವರಿ ದೇವರ ಪೂಜಾ ಮಹೋತ್ಸವ



• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ದೊಡ್ಡಕೆರೆ ಅಂಗಳದ ಸನ್ನಿಧಿಯಲ್ಲಿ ನೆಲೆ ನಿಂತಿರುವ ಶಕ್ತಿ ದೇವತೆ ಶ್ರೀ ಚೌಡೇಶ್ವರಿ ದೇವರ ಪೂಜಾ ಮಹೋತ್ಸವ ಮಂಗಳವಾರ ಭಕ್ತಿ ಭಾವದ ಸಂಭ್ರಮದಿಂದ ಜರುಗಿತು.

ದೇವಸ್ಥಾನದಲ್ಲಿ ಆದಿತ್ಯಾದಿ ನವಗ್ರಹ ಪೂಜೆ, ಹೋಮ, ಪಂಚಾಮೃತ ಅಭಿಷೇಕ, ಅಲಂಕಾರ, ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನಡೆಯಿತು. ಸುತ್ತಲಿನ ಏಳು ಹಳ್ಳಿಗಳ ಸಹಸ್ರಾರು ಭಕ್ತರು ಪೂಜಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಸಾವಿರಾರು ಭಕ್ತರಿಗೆ ಸಾಮೂಹಿಕವಾಗಿ ಊಟದ ವ್ಯವಸ್ಥೆ ಏರ್ಪಡಿಸಲಾಗಿತ್ತು.

ಅರ್ಚಕ ಹರೀಶ್ ಪೂಜಾ ವಿಧಾನಗಳನ್ನು ನಡೆಸಿಕೊಟ್ಟರು. ಭಕ್ತರ ಇಷ್ಟಾರ್ಥ ಈಡೇರಿಸುವ ಚೌಡೇಶ್ವರಿ ಮಹಿಮೆ ಅಪಾರ ವಾಗಿದೆ ಎಂದರು.

ಸಮಿತಿಯ ಜಯಕುಮಾರ್ ಮಾತನಾಡಿ, ದೇವಸ್ಥಾನ ಪೂಜಾ ಮಹೋತ್ಸವದಲ್ಲಿ ಸುತ್ತಲಿನ ಹಳ್ಳಿಗಳ ಭಕ್ತರು ಭಾಗವಹಿಸಿ ಯಶಸ್ವಿಯಾಗಿದೆ ಎಂದರು.

ಸಮಿತಿಯ ಶಿವರಾಜ್, ರಾಜಣ್ಣ, ಯೋಗೇಶ್, ನಾಗರಾಜ್, ನಂದಕುಮಾರ್, ಸ್ವಾಮಿ, ಸಂತೋಷ್, ವೆಂಕಟೇಶ್ ಹಾಗೂ ಅಪಾರ ಭಕ್ತರು ಪಾಲ್ಗೊಂಡಿದ್ದರು.

# ನಾಳೆಯಿಂದ 29 ರ ವರೆಗೆ ಮಹಾಕಾಳಿ ದೇವಿ ಜಾತ್ರೆ

• ಪ್ರಜೋದಯ ವರದಿ

**ಅರಸೀಕೆರೆ:** ಸುತ್ತಮುತ್ತಲಿನ ಹತ್ತಾರು ಗ್ರಾಮಗಳಿಗೆ ಗ್ರಾಮದೇವತೆಯಾಗಿರುವ ತಳಲೂರು ಬನ್ನಿ ಮಹಾಕಾಳಿ ದೇವಿಯ ಜಾತ್ರಾ ಮಹೋತ್ಸವ ಮಾ.25 ರಿಂದ 29 ರ ವರೆಗೆ ದೇವಾಲಯದ ಸಂಪ್ರದಾಯದಂತೆ ನಡೆಯಲಿದೆ ಎಂದು ದೇವಾಲಯದ ಅಭಿವೃದ್ಧಿ ಸಮಿತಿ ತಿಳಿಸಿದೆ.

ಈ ಕುರಿತು ದೇವಾಲಯದ ಅಭಿವೃದ್ಧಿ ಸಮಿತಿ ಸದಸ್ಯರು ಸುದ್ದಿಗಾರರೊಂದಿಗೆ ಮಾತನಾಡಿ, ದೇವಿಯ ಅಪ್ಪಣೆ ಮೇರೆಗೆ ಜಾತ್ರಾ ಮಹೋತ್ಸವದ ದಿನಾಂಕವನ್ನು ನಿಗದಿ ಮಾಡಲಾಗಿದ್ದು ಸಂಪ್ರದಾಯದಂತೆ ಜಾತ್ರಾ ಮಹೋತ್ಸವದ ಮೊದಲನೇ ದಿನ ಅಂಕುರಾರ್ಪಣೆ, ಮಧುವಣಿಗೆ ಶಾಸ್ತ್ರ, ಕಂಕಣ ಶಾಸ್ತ್ರ, ಶ್ರೀ ಬಿದಿ ಮಾರಮ್ಮ ದೇವಿಯ ದೇವಾಲಯ ಪ್ರವೇಶ ನಂತರ ಮಹಾಮಂಗಳಾರತಿ ನಡೆಯಲಿದೆ.



ಜಾತ್ರಾ ಮಹೋತ್ಸವದ ಎರಡನೇ ದಿನವಾದ ಮಾ.26ರಂದು ಮಧುವಣಿಗೆ ಶಾಸ್ತ್ರ, ರಥಕ್ಕೆ ಪೂಜೆ, ರಥ ಪರದಕ್ಷಿಣೆ, ನಡೆದ ಬಳಿಕ ಮಹಾ ಮಂಗಳಾರತಿಯೊಂದಿಗೆ ಎರಡನೇ ದಿನದ ದೇವಿ ಆರಾಧನೆ ಸಂಪನ್ನಗೊಳ್ಳಲಿದೆ.

ಮಾ.27ರ ಮುಂಜಾನೆ ಧ್ವಜಾರೋಹಣ ಕಳಸ ಸ್ಥಾಪನೆ ಅಮ್ಮನವರ ಮೂಲ ಸನ್ನಿಧಾನದಲ್ಲಿ ಪುಣ್ಯಾಹ ದೇವಿಯರ ಮೂಲ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ನಡೆಯಲಿದ್ದು ಬಳಿಕ ಶ್ರೀ ಬನ್ನಿ ಮಹಾಕಾಳಿದೇವಿ ಹಾಗೂ ಬೀದಿ ಮಾರಮ್ಮ ದೇವಿಗೆ ಆರತಿ ಬಾನಾ ನೈವೇದ್ಯ ಹರಕೆ ಹೊತ್ತು ಭಕ್ತರಿಂದ ಬಾಯಿಗೆ ಬೀಗ ನಡೆದ ಬಳಿಕ ರಾತ್ರಿ ದೇವಾಲಯದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ ಎಂದು ಅವರು ವಿವರಣೆ ನೀಡಿದರು.

ಮಾರ್ಚ್ 28ರ ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಶಂಭುಲಿಂಗೇಶ್ವರ ಸ್ವಾಮಿ ಅವರ ಕೆಂಡೋತ್ಸವ, ನಂತರ ಗ್ರಾಮ ದೇವತೆಯರಿಗೆ ಗಂಗಾ ಸ್ನಾನ, ಕರ್ಪೂರ ಸೇವೆ ಹೀಗೆ ದೇವಾಲಯದ ಸಂಪ್ರದಾಯಿದಂತೆ ಪೂಜೆ ಪುನಸ್ಕಾರಗಳು ಜರುಗಲಿದೆ ಎಂದು ಮಾಹಿತಿ ನೀಡಿದರು.

**ಮಹಾ ರಥೋತ್ಸವ:** ಮಾ.29 ಭಾನುವಾರ ಮಧ್ಯಾನ ಅಮ್ಮನವರ ಮಹಾ ರಥೋತ್ಸವವು ಜರುಗಲಿದ್ದು ರಥೋತ್ಸವದ ಬಳಿಕ ಉಯ್ಯಾಲೆ ಸೇವೆ ನಡೆಯಲಿದೆ.ಇದರೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದು ಹೇಳಿದ ಅವರು, ಗ್ರಾಮ ದೇವತೆಯರ ಈ ಜಾತ್ರಾ ಮಹೋತ್ಸವದಲ್ಲಿ ಗ್ರಾಮಸ್ಥರು ದೇವಿಯ ಒಕ್ಕಲಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಗ್ರಾಮ ದೇವತೆಯರ ಅನುಗ್ರಹಕ್ಕೆ ಪಾತ್ರರಾಗುವಂತೆ ಮನವಿ ಮಾಡಿದರು.

ಶ್ರೀ ಬನ್ನಿ ಗೆಳೆಯರ ಬಳಗ ಹಾಗೂ ಭಕ್ತ ವೃಂದದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಸಹ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತಾಧಿಗಳಿಗೆ ಸಾಮೂಹಿಕ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

# ಭರತನಾಟ್ಯ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ನವೋದಯ ವಿದ್ಯಾ ಸಂಸ್ಥೆಯ ಆವರಣದಲ್ಲಿ ನಡೆದ ಕಲರ್ಸ್ ಕನ್ನಡತಿ ಕಾರ್ಯಕ್ರಮದಲ್ಲಿ ನೃತ್ಯ ವಿಹಾರ್ ಸಂಸ್ಥೆಯ ವಿದೂಷಿ ಶುಭ್ರತಾ ಆವರ ಶಿಷ್ಯರಾದ ಕೀರ್ತನ ಮತ್ತು ಪೂರ್ಣಿಮ ಅವರು ಭರತನಾಟ್ಯ ಕಾರ್ಯಕ್ರಮ ನೀಡಿದರು.

# ಹೊಸ ವಿದ್ಯುತ್ ಮಾರ್ಗ: ಎಚ್ಚರ ವಹಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದ ವತಿಯಿಂದ ನಿರ್ಮಾಣ ಆಗುತ್ತಿರುವ ಹೊಸ ವಿದ್ಯುತ್ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲಾಗುತ್ತಿದೆ.

ಹಾಸನ ತಾಲ್ಲೂಕಿನ ದುದ್ದ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ ಹಾಗೂ 220ಕೆ.ವಿ. ಮತ್ತು 66ಕೆ.ವಿ. ವಿದ್ಯುತ್ ಮಾರ್ಗಗಳಾದ 1.220ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ 110 ಕೆ.ವಿ ಗಂಡಸಿ ವಿ.ವಿ. ಕೇಂದ್ರಕ್ಕೆ ಸಂಪರ್ಕಿಸುವ ಮಾರ್ಗವನ್ನು ನಿರ್ಮಿಸುವ ಕಾಮಗಾರಿ, 2.220 ಕೆ.ವಿ. ದುದ್ದ ಸ್ವೀಕರಣಾ ಕೇಂದ್ರದಿಂದ 66/11 ಕೆ.ವಿ ಸಾತೇನಹಳ್ಳಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಸಂಪರ್ಕಿಸುವ 18.275 ಕಿ.ಮೀ. ವಿದ್ಯುತ್ ಮಾರ್ಗದ ಕಾಮಗಾರಿ ಮುಕ್ತಾಯಗೊಂಡಿದ್ದು, 110 ಕೆ.ವಿ. ಮತ್ತು 66 ಕೆ.ವಿ. ವಿದ್ಯುತ್ ಹರಿಸಲಾಗುವುದು.

ಸಾರ್ವಜನಿಕರು ಮಾರ್ಗದ ವಿದ್ಯುತ್ ಗೋಪುರವನ್ನು ಹತ್ತುವುದಾಗಲಿ, ಅವುಗಳಿಗೆ ದನ-ಕರುಗಳನ್ನು ಕಟ್ಟುವುದಾಗಲಿ, ಹಸಿರು ಬಳ್ಳಿ ಅಥವಾಲೋಹದ ತಂತಿಗಳನ್ನು ಎಸೆಯುವುದಾಗಲಿ ಮಾಡಬಾರದು. ಇದರಿಂದ ಸಾರ್ವಜನಿಕರ ಆಸ್ತಿ ಮತ್ತು ಪ್ರಾಣಕ್ಕೆ ಹಾನಿಯಾಗುವ ಸಂಭವ ವಿರುತ್ತದೆ.

ವಿದ್ಯುತ್ ಮಾರ್ಗದ 18 ಮತ್ತು 22 ಮೀಟರ್ ಕಾರಿಡಾರ್ ಅಡಿಯಲ್ಲಿ ಯಾವುದೇ ರೀತಿಯ ಕಟ್ಟಡ ಕಟ್ಟುವುದಾಗಲಿ ಮಾಡಬಾರದು. ಸಾರ್ವಜನಿಕರ ಬೇಜವಾಬ್ದಾರಿಯಿಂದ ಆಗುವ ಅನಾಹುತಗಳಿಗೆ ವಿದ್ಯುತ್ ಪ್ರಸರಣ ನಿಗಮ ಜವಾಬ್ದಾರಿಯಾಗಿರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

## ಬೇಲೂರು: 'ಹದಿಹರೆಯದ ವಿದ್ಯಾರ್ಥಿಗಳ ಆರೋಗ್ಯದ ಸ್ಥಿತಿಗತಿಗಳು' ವಿಶೇಷ ಉಪನ್ಯಾಸ

# ದುಶ್ಚಟಗಳ ಸಹವಾಸದಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ

• ಪ್ರಜೋದಯ ವರದಿ

**ಬೇಲೂರು:** ಇತ್ತೀಚಿನ ದಿನಗಳಲ್ಲಿ ಯುವ ಜನಾಂಗದಲ್ಲಿ ದುಶ್ಚಟಗಳ ಸಹವಾಸದಿಂದ ಯುವಕರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಯುವ ಸಮುದಾಯದ ತಮ್ಮ ಆರೋಗ್ಯದ ಸದೃಢತೆಗೆ ಹೆಚ್ಚಿನ ಗಮನ ನೀಡಬೇಕು ಎಂದು ವೈಡಿಡಿ ಕಾಲೇಜು ಸಮಿತಿ ಸದಸ್ಯ ಗಿರಿಯಪ್ಪಶೆಟ್ಟಿ ಅವರು ತಿಳಿಸಿದರು.

ಪಟ್ಟಣದ ಹೊರ ವಲಯದಲ್ಲಿರುವ ವೈಡಿಡಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಐ.ಕ್ಯು.ಎ.ಸಿ., ಯುವ ರೆಡ್ ಕ್ರಾಸ್ ಘಟಕ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಬೇಲೂರು ವತಿಯಿಂದ ಹಮ್ಮಿಕೊಂಡ ವಿಶ್ವ ಆರೋಗ್ಯ ದಿನ ಮತ್ತು ವಿಶ್ವ ಕ್ಷಯ ರೋಗ ದಿನದ ಅಂಗವಾಗಿ ಪ್ರಸ್ತುತ ಹದಿಹರೆಯದ ವಿದ್ಯಾರ್ಥಿಗಳ ಆರೋಗ್ಯದ ಸ್ಥಿತಿಗತಿಗಳು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈಡಿಡಿ ಕಾಲೇಜು ಇತ್ತೀಚಿನ ದಿನದಂದು ಉತ್ತಮ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಗಳನ್ನು ನಡೆಸುತ್ತಿರುವುದು ಶ್ಲಾಘನೀಯ. ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಇಂದು ಉತ್ತಮ ಕಾರ್ಯಕ್ರಮ ನಡೆಸಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಬೇಲೂರು ಆರೋಗ್ಯ ಇಲಾಖೆ ಶಿಕ್ಷಣಾಧಿಕಾರಿ ಉಷಾ ಪೂರ್ಣೇಶ್ ಅವರು ಮಾತನಾಡಿ, ಹದಿಹರೆಯದವರ ಆರೋಗ್ಯವು ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬದಲಾವಣೆಗಳ ನಿರ್ಣಾಯಕ ಹಂತವಾಗಿದೆ. ಪೌಷ್ಟಿಕ ಆಹಾರ, ವ್ಯಾಯಾಮ,



ಮತ್ತು ಭಾವನಾತ್ಮಕ ಬೆಂಬಲದೊಂದಿಗೆ, ಖಿನ್ನತೆ, ಆತಂಕ, ಮತ್ತು ಅಪೌಷ್ಟಿಕತೆಯಂತಹ ಅಪಾಯಗಳನ್ನು ತಡೆಗಟ್ಟಬಹುದು. ಆರೋಗ್ಯಕರ ಜೀವನಶೈಲಿ, ಸಕಾಲಿಕ ಲಸಿಕೆ ಮತ್ತು ಮುಕ್ತ ಸಂವಹನವು ಈ ವಯಸ್ಸಿನ ಸಮಗ್ರ ಬೆಳವಣಿಗೆಗೆ ಅತ್ಯಗತ್ಯವಾಗಿದೆ ಯುವ ಜನಾಂಗ ಉದಾಸೀನದಿಂದ ಹೊರ ಬಂದು ಆರೋಗ್ಯದ ಮೇಲೆ ನಿಗಾ ವಹಿಸಿ ಎಂದು ಕರೆ ನೀಡಿದರು.

ಭಾರತೀಯ ರೆಡ್‌ಕ್ರಾಸ್ ಬೇಲೂರು ತಾಲ್ಲೂಕು ಘಟಕದ ಸಭಾಪತಿ ವೈ.ಎಸ್.ಸಿದ್ದೇಗೌಡ ಮಾತನಾಡಿ, ರೆಡ್ ಕ್ರಾಸ್ ಸಂಸ್ಥೆ ಜಿನೀವಾದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಒಂದು ಸ್ವತಂತ್ರ, ತಟಸ್ಥ ಮಾನವೀಯ ಸಂಸ್ಥೆಯಾಗಿದೆ. 1863 ರಲ್ಲಿ ಸ್ಥಾಪಿತವಾದ ಇದು, ಯುದ್ಧ ಮತ್ತು ವಿಪತ್ತುಗಳ ಸಂದರ್ಭದಲ್ಲಿ ಗಾಯಗೊಂಡ ಸೈನಿಕರು, ನಿರಾಶ್ರಿತರು ಮತ್ತು ನಾಗರಿಕರ ರಕ್ಷಣೆ ಹಾಗೂ ಆರೋಗ್ಯ ಸೇವೆಗಳನ್ನು ಒದಗಿಸುತ್ತದೆ. ಇದು ಜಾಗತಿಕವಾಗಿ ಅತಿದೊಡ್ಡ ಸ್ವಯಂ ಸೇವಕ ನೆಟ್‌ವರ್ಕ್ ಹೊಂದಿದ್ದು ಬೇಲೂರು ತಾಲ್ಲೂಕು ಘಟಕ ಪ್ರಸಕ್ತ ಹಾಲಿನಲ್ಲಿ ಜನಪರ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಬಗ್ಗೆ ತಿಳಿಸಿದರು.

ವೈ ಡಿ ಡಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ. ಮಹೇಶ್ ಮಾತನಾಡಿ, ಕಾಲೇಜು ವಿದ್ಯಾರ್ಥಿಗಳಲ್ಲಿ ಆರೋಗ್ಯವು ಮುಖ್ಯವಾಗಿ ದೀರ್ಘಕಾಲದ ಒತ್ತಡ, ಆತಂಕ, ಖಿನ್ನತೆ ಮತ್ತು ನಿದ್ರೆಯ ಕೊರತೆಯಿಂದಾಗಿ ಹದಗೆಡುತ್ತಿದೆ, ಇದು ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಸಮರ್ಪಕ ನಿದ್ರೆ, ಪೌಷ್ಟಿಕ ಆಹಾರ, ನಿಯಮಿತ ದೈಹಿಕ ಚಟುವಟಿಕೆ ಮತ್ತು ಮಾನಸಿಕ ಆರೋಗ್ಯ ಸಂಪನ್ಮೂಲಗಳ ಬಳಕೆ ಈ ಸಮಸ್ಯೆಗಳನ್ನು ಕಡಿಮೆ ಮಾಡಲು ಅವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗೆಂಡೇಹಳ್ಳಿ ಆರೋಗ್ಯ ವೈದ್ಯಾಧಿಕಾರಿ ಡಾ.ಶ್ವೇತ, ಭಾರತೀಯ ರೆಡ್ ಕ್ರಾಸ್ ಬೇಲೂರು ಘಟಕದ ಕಾರ್ಯದರ್ಶಿ ಧನಂಜಯ, ನವೀನ್ ಕುಮಾರ್ ಹರ್ಷಿತ ಸಂಸ್ಥೆ, ಹಾಸನ ಜಿಲ್ಲಾ ಸಂಯೋಜಕರು ಹಾಗೂ ಶ್ರೀ ಮಂಜುನಾಥ ಎಸ್ ಪಿ., ಸಂಚಾಲಕರು ಯುವ ರೆಡ್ ಕ್ರಾಸ್ ಘಟಕ. ವೈ.ಡಿ.ಡಿ. ಸ.ಪ್ರ.ದ ಕಾ. ಬೇಲೂರು, ಕಲಾವತಿ ಮಧುಸೂದನ್, ಆಶಾಕಿರಣ್ ಇದ್ದರು.

